
ಬ್ರಹ್ಮರ್ಷಿ ಪಿತಾಮಹ ಡಾ. ಸುಭಾಷ್ ಪತ್ರೀಜಿಯವರ ಆಶೀರ್ವಾದಗಳೊಂದಿಗೆ

# ಮೂರು ರೀತಿಯ ಜೀವನಗಳು




ರಚನೆ

ಬ್ರಹ್ಮರ್ಷಿ

ತಟವರ್ತಿ ವೀರರಾಘವರಾವ್

ಕನ್ನಡಕ್ಕೆ ಅನುವಾದ: ಕೆ. ಶೋಭಾಲತ ಮಲ್ಲಿಕಾರ್ಜುನ


ಶ್ರೀ ರಾಮಧಾಮ
SRI RAMADHAMA
ಯೋಗಾಭ್ಯಾಸ ಮಂದಿರ
YOGA MANDIRA


SRI RAMADHAMA DHYANA MANDIRA
3 DAYS SILENCE
MEDITATION
CAMP

# ಮೂರು ರೀತಿಯ ಜೀವನಗಳು



ರಚನೆ: ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್

**ಕನ್ನಡಕ್ಕೆ ಅನುವಾದ: ಕೆ. ಶೋಭಾಲತ ಮಲ್ಲಿಕಾರ್ಜುನ**

**ಪ್ರತಿಗಳು ದೊರೆಯುವ ಸ್ಥಳ**


**ಶ್ರೀರಾಮ ಪಬ್ಲಿಕೇಶನ್ಸ್**
ಶ್ರೀ ರಾಮಧಾಮ ಧ್ಯಾನ ಮಂದಿರ
ನಾರಾಯಣಪ್ಪ ಗಾರ್ಡನ್, ವೈಟ್‌ಫೀಲ್ಡ್ ಬೆಂಗಳೂರು– 560 066

---

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**MOORU REETIYA JEEVANAGALU**
Edited & Published by Sriram Publications,
Sri Ramadhama Dhyana Mandira
Narayanappa Garden, Whitefield,
Bangalore - 560066, M.: 9449695503, 8050082689

| | | |
|---|---|---|
| ಮೊದಲನೆಯ ಮುದ್ರಣ | : | 2026 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | ಶ್ರೀರಾಮ ಪಬ್ಲಿಕೇಶನ್ಸ್<br>ಶ್ರೀರಾಮಧಾಮ ಧ್ಯಾನ ಮಂದಿರ<br>ನಾರಾಯಣಪ್ಪ ಗಾರ್ಡನ್ ವೈಟ್ ಫೀಲ್ಡ್<br>ಬೆಂಗಳೂರು 560066<br>ಮೊ: 9449695503 |
| ಪ್ರತಿಗಳು | : | 1000 |
| ಬೆಲೆ | : | ರೂ.50 |
| ಪುಟಗಳು | : | 40 |
| ಅಕ್ಷರ ಜೋಡಣೆ | : | ಸೋಮನಾಥ ರೆಡ್ಡಿ, ಮೊ.: 9739996589 |




**"ಯಾವುದನ್ನು ಹೊಂದಿದ ಮೇಲೆ ಇನ್ನು ಹೊಂದಬೇಕಾಗುವುದು ಇಲ್ಲವೋ, ಯಾವ ಸುಖವನ್ನು ಅನುಭವಿಸಿದ ನಂತರ ಇನ್ನು ಹೊಂದಬೇಕಾದ ಸುಖವಿಲ್ಲವೋ, ಯಾವ ಜ್ಞಾನವನ್ನು ಹೊಂದಿದ ನಂತರ ಇನ್ನು ಹೊಂದಬೇಕಾದ ಜ್ಞಾನವಿಲ್ಲವೋ ಅದೇ ಬ್ರಹ್ಮವೆಂದು ತಿಳಿದುಕೊಳ್ಳಿ."**

**– ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್**

# ಸ್ವ ಪರಿಚಯ

ನನ್ನ ಹೆಸರು ಎಚ್.ಎನ್. ಶ್ರೀನಿವಾಸ ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990 ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999 ರಲ್ಲಿ ಎಸ್ ಎಸ್ ವೈ ಅಂದರೆ ಸಿದ್ಧ ಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004 ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್ ಫೀಲ್ಡ್ ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎಂ. ವಿಜಯಲಕ್ಷ್ಮಿ ಸೇರಿ 2008 ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ "ಶ್ರೀರಾಮ ಧಾಮ ಧ್ಯಾನ ಮಂದಿರ" ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು ಅದನ್ನು ಸಿದ್ಧ ಸಮಾಧಿ ಯೋಗ ಸಂಸ್ಥಾಪಕರಾದ ಡಾ. ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಪಿತಾಮಹ ಡಾ. ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮ ಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ "ಅನಾಪಾನಸತಿ ಧ್ಯಾನ" ವಿಧಾನವನ್ನು ಪರಿಚಯ ಮಾಡಿಸಿದರು.

ಪತ್ರೀಜಿಯವರನ್ನು ಭೇಟಿಯಾದ ನಂತರ ದಿನನಿತ್ಯದ ನಮ್ಮ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವ ಸಿದ್ಧಾಂತದಲ್ಲಿ ಗುರು ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. ಯಾರೂ ಶಾಶ್ವತವಾಗಿ ಗುರುಗಳಲ್ಲ. ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ. ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ ಎಂದಿಗೂ ಶಿಷ್ಯರಾಗಿಯೇ ಇರಬೇಡಿ ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013 ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದಾವಕಾಶವನ್ನು ಒದಗಿಸಿದರು. ಇದರಲ್ಲಿ ನನಗೆ ನಿತ್ಯ ಅನ್ನದಾನ ಸೇವೆಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ ಆಸಕ್ತಿಯಿಂದ ಧ್ಯಾನ ಅಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ ಸಸ್ಯಾಹಾರ, ಸ್ವಾಧ್ಯಾಯ, ಸಜ್ಜನ ಸಾಂಗತ್ಯ ಅಂದರೆ ಸತ್ಸಂಗ ಹಾಗೂ ಪಿರಮಿಡ್ ಶಕ್ತಿ ಬಳಕೆ ಅವಶ್ಯಕ ಎಂದು ಆಧ್ಯಾತ್ಮ ಶಾಸ್ತ್ರ ತಿಳಿಸುತ್ತದೆ. ನಿರಂತರ ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ ವಿಕಾಸ ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು.

ಹೊಸಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ "ಶ್ರೀರಾಮ ಪಬ್ಲಿಕೇಷನ್" ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರ ರಾಘವರಾವ್ ಅವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರು ಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡಕ್ಕೆ ಆಧ್ಯಾತ್ಮ ಸಾಧಕರಿಗೂ ದೊರೆಯಬೇಕು ಎಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು...

**– ಎಚ್.ಎನ್. ಶ್ರೀನಿವಾಸ ಮತ್ತು ಎಸ್.ಎನ್. ವಿಜಯಲಕ್ಷ್ಮಿ**

ಸಂಸ್ಥಾಪಕರು ಶ್ರೀರಾಮಧಾಮ ಧ್ಯಾನ ಮಂದಿರ

# ಮೂರು ರೀತಿಯ ಜೀವನಗಳು

ಮಾನವರಿಗೆ ಮೂರು ರೀತಿಯ ಜೀವನಗಳಿರುತ್ತವೆ. ಈ ಮೂರು ಕೂಡ ಮಾನವನ ಜ್ಞಾನಪರಿಧಿಯನ್ನು ಸೂಚಿಸುವಂತವೇ. ಹೀಗಾಗಿ ಈ ಮೂರು ರೀತಿಯ ಜೀವನಗಳನ್ನು ಜೀವಿಸುವವರ ಕುರಿತು ತಿಳಿದುಕೊಳ್ಳೋಣ. ನಿಜವಾಗಿಯೂ ಯಾವುವು ಆ ಮೂರು ರೀತಿಯವು.

1) ರಾತ್ರಿ ಜೀವನ 2) ಸಂಧ್ಯಾ ಜೀವನ 3) ಹಗಲು ಜೀವನ

## 1. ರಾತ್ರಿಯ ಜೀವನ

ರಾತ್ರಿಯ ಜೀವನ ಅಂದರೆ ಪೂರ್ತಿಯಾಗಿ ಅಜ್ಞಾನದಿಂದ ಇರುವಂತಹ ಜೀವನ. ಅದಕ್ಕೆ ಅಜ್ಞಾನವನ್ನು ಕತ್ತಲಿನೊಂದಿಗೆ ಹೋಲಿಸುತ್ತಾರೆ. ಕತ್ತಲಿನಲ್ಲಿರುವಂಥವು ಹೇಗೆ ಕಾಣಿಸುವುದಿಲ್ಲವೋ ಅಜ್ಞಾನದಲ್ಲಿರುವವರಿಗೆ ಇರುವಂತವು ಕಾಣಿಸುವುದಿಲ್ಲ ಅಂದರೆ ತಿಳಿಯವು. ವಿಚಿತ್ರವೇನೆಂದರೆ ಅಜ್ಞಾನದಲ್ಲಿರುವವರಿಗೆ ಇರಲಾರದೆಲ್ಲವೂ ಕಾಣಿಸುತ್ತಾ ಇರುತ್ತವೆ. ಆದ್ದರಿಂದ ಇವರಿಗೆ ಏನೂ ತಿಳಿಯದು ಎಂದುಕೊಳ್ಳಬಹುದು. ಅವರಿಗೆ ಏನು ಮಾಡಬೇಕು ತಿಳಿಯದು ಹೀಗಾಗಿ ಮಾಡಬಾರದವುಗಳನ್ನೆಲ್ಲ ಮಾಡುತ್ತಿರುತ್ತಾರೆ. ಏನು ಮಾತನಾಡಬೇಕು ತಿಳಿಯದು, ಆದ್ದರಿಂದ ವ್ಯರ್ಥವಾದವು ಮಾತನಾಡುತ್ತಾರೆ. ವಿರುದ್ಧವಾದವುಗಳನ್ನು ಮಾತನಾಡುತ್ತಾರೆ. ಹಾಗೆಯೇ ಏನು ಆಲೋಚಿಸಬೇಕು ಎಂಬುದು ಕೂಡ ತಿಳಿಯದು. ಅವರು ನಷ್ಟವನ್ನುಂಟು ಮಾಡುವಂಥವೇ ಆಲೋಚಿಸುತ್ತಾರೆ ಏಕೆಂದರೆ ನಾವು ಹೇಳುವುದು ಅಜ್ಞಾನದಲ್ಲಿರುವವರಿಗೆ ಅರ್ಥವಾಗದು, ಇರುವುದು ಅವರಿಗೆ ಕಾಣಿಸದು. ಇರುವುದು ಏನು ಎಂದರೆ ಆತ್ಮ. ಆತ್ಮವು ಇವರಿಗೆ ಕಾಣಿಸದು. ಆತ್ಮವಿರುವ ಲೋಕಗಳು ಇವರಿಗೆ ಕಾಣಿಸುವುದಿಲ್ಲ. ಈ ಲೋಕದಲ್ಲಿ ಇರುವವರು ಕಾಣಿಸಲು, ಈ ಸೃಷ್ಟಿ ನಡೆಯಲು ಏರ್ಪಾಟು ಮಾಡಲ್ಪಟ್ಟ ಸಿದ್ಧಾಂತಗಳು ಇವರಿಗೆ ಕಾಣಿಸುವುದಿಲ್ಲ, ಧರ್ಮಗಳು ತಿಳಿಯುವುದಿಲ್ಲ. ಅವನು ಮಾಡಿದ ಕರ್ಮಗಳು ದಾಖಲಾಗುತ್ತವೆ ಅಂದರೆ ಎಲ್ಲವೂ

ರೆಕಾರ್ಡ್ ಆಗುತ್ತವೆ. ಅವುಗಳ ಫಲವೇ ಕಷ್ಟಗಳ ರೂಪದಲ್ಲಿ ಅನುಭವಿಸುತ್ತಿದ್ದೇನೆ ಎನ್ನುವ ಸಂಗತಿ ಕೂಡ ಅಜ್ಞಾನದಲ್ಲಿರುವವರಿಗೆ ತಿಳಿಯುವುದಿಲ್ಲ. ಆದಕಾರಣ

ಈ ರಾತ್ರಿ ಜೀವನವನ್ನು ಜೀವಿಸುವವರಿಗೆ ಈ ಜ್ಞಾನವು ಇಲ್ಲದಿರುವುದರಿಂದ ಅಜ್ಞಾನದಲ್ಲಿರುವುದರಿಂದ ಎಲ್ಲ ಬೇರೆ ಬೇರೆ ಎಂದುಕೊಳ್ಳುತ್ತಾರೆ. ಏನು ಮಾಡಬೇಕು ಎನ್ನುವುದು ತಿಳಿಯದೇ ಮಾಡಬಾರದವುಗಳನ್ನು ಮಾಡುತ್ತಾರೆ. ಇದು ನಿಮಗೆ ಹಗಲಿನ ಜೀವನದ ಒಳಗೆ ಬರದೆ, ಅಂದರೆ ಜ್ಞಾನ ಜೀವನದ ಒಳಗೆ ಬರದಹೊರತು ಅರ್ಥವಾಗುವುದಿಲ್ಲ. ಜ್ಞಾನಿಗಳಾದರೆ ಎಲ್ಲ ಆತ್ಮಗಳೇ.. ಎಲ್ಲ ಒಂದೇ ಎಂದು ಅರ್ಥವಾಗುತ್ತದೆ. ಆದರೆ, ರಾತ್ರಿಯ ಜೀವನದಲ್ಲಿ ಇರುವವರು ಅಂದರೆ ಅಜ್ಞಾನದಲ್ಲಿ ಇರುವವರು ಎಲ್ಲ ಬೇರೆ ಬೇರೆ ಎಂದು ಭಾವಿಸುತ್ತಾರೆ.


ತನ್ನ ಸ್ವಾರ್ಥವನ್ನು ನೋಡಿಕೊಳ್ಳುತ್ತಾ, ಇತರರಿಗೆ ಏನೇ ಆದರೂ ಚಿಂತೆ ಇಲ್ಲ ಎಂದುಕೊಳ್ಳುತ್ತಾ ಮಾಡಬಾರದ ಕೆಲಸಗಳನ್ನು ಮಾಡುತ್ತಾರೆ. ಅವರಿಗೆ ಏನು ಮಾಡಬೇಕು ತಿಳಿಯದು, ಹೇಗೆ ಮಾತನಾಡಬೇಕು ತಿಳಿಯದು. ಸುಮ್ಮನೆ ವ್ಯರ್ಥವಾಗಿ ಮಾತನಾಡುತ್ತಾರೆ. ವಿಮರ್ಶಿಸುತ್ತಾ, ದೂಷಿಸುತ್ತಾ ಇರುತ್ತಾರೆ, ಅವಮಾನಿಸುತ್ತಾರೆ. ಹೀಗೆ ಮಾಡುವುದರಿಂದ ರಾತ್ರಿ ಜೀವನವನ್ನು ಜೀವಿಸುವವರಿಗೆ ಕಷ್ಟಗಳು ಹೆಚ್ಚಾಗಿ ಇರುತ್ತವೆ. ಈ ರಾತ್ರಿ ಜೀವನದಲ್ಲಿ ಇರುವವರು ಎಂದರೆ ಅಜ್ಞಾನದಲ್ಲಿ ಇರುವವರು. ಅಂದರೆ ಅಜ್ಞಾನದಲ್ಲಿ ಇರುವವರು ಎಷ್ಟೋ ಹೊತ್ತೂ ಇರಲಾರದವುಗಳನ್ನೇ ಹೆಚ್ಚಿಸಿಕೊಳ್ಳಬೇಕೆಂದೇ ನೋಡುತ್ತಾರೆ. ಅವುಗಳನ್ನೇ ಸಂಪಾದಿಸಿಕೊಳ್ಳಬೇಕು ಎಂದುಕೊಳ್ಳುತ್ತಾರೆ. ಅವುಗಳನ್ನೇನಾದರು ಹೊಂದಿದರೆ ಅದೃಷ್ಟವಂತರು ಎಂದುಕೊಳ್ಳುತ್ತಾರೆ ಉಬ್ಬಿ ಹೋಗುತ್ತಾರೆ. ಯಾರಾದರೂ ಒಂದು ಬಿರುದು ಅಥವಾ ಅವಾರ್ಡ್ ಕೊಟ್ಟರೆ ತಾನೇನೋ ಬಹಳ ದೊಡ್ಡ ಕೆಲಸವನ್ನು ಮಾಡಿದ್ದೇನೆ ಎನ್ನುವಂತೆ ಉಬ್ಬಿ ಹೋಗುತ್ತಾರೆ, ಗರ್ವ ಪಡುತ್ತಾರೆ. ಅಂತಹವುಗಳನ್ನ ಸಂಪಾದಿಸಿದರೇನೇ ದೊಡ್ಡವರಾದಂತೆ ಭಾವಿಸುತ್ತಾರೆ. ಇಂಥವರೆಲ್ಲ ರಾತ್ರಿ ಜೀವನವನ್ನು ಜೀವಿಸುತ್ತಾ ಇರುವವರು, ಆದ್ದರಿಂದ ಎಲ್ಲ ವಿಷಯಗಳಲ್ಲಿ ಇವರ ವರ್ತನೆ ಪೂರ್ತಿಯಾಗಿ ಆತ್ಮಕ್ಕೆ ವಿರುದ್ಧವಾಗಿರುತ್ತದೆ.

ಏಕೆಂದರೆ ಈ ರಾತ್ರಿ ಜೀವನವನ್ನು ಜೀವಿಸುವವರಿಗೆ ಆತ್ಮವಿದ್ದರೂ ಕಾಣಿಸುವುದಿಲ್ಲ. ಅದಕ್ಕೆ ಆತ್ಮನನ್ನು ಹಿಡಿಸಿಕೊಳ್ಳಲು ಆತ್ಮದ ಕುರಿತು ಆಲೋಚನೆ ಮಾಡಲಾರರು. ಆತ್ಮದ ಬಗ್ಗೆಯಾಗಲೀ ಅಥವಾ ಅದರ ಶ್ರೇಷ್ಠತೆಯನ್ನಾಗಲಿ ತಿಳಿದುಕೊಳ್ಳಲಾರರು. ಆತ್ಮದ ಉನ್ನತಿಗೆ ಅವರು ಶ್ರಮಿಸಲಾರರು. ಹೀಗಾಗಿ ಅವರು ಮಾಡುವ ಕೆಲಸಗಳಿಂದ ಆತ್ಮಕ್ಕೆ ಯಾವ ಪ್ರಯೋಜನವೂ ಉಂಟಾಗುವುದಿಲ್ಲ. ಜೀವನದಲ್ಲಿ ಕೊನೆಗೆ ಆತ್ಮದ ಕುರಿತು ತಿಳಿದುಕೊಂಡ ನಂತರ ಎಷ್ಟೋ ನೋವು ಪಡುತ್ತಾರೆ.

“ಅರೆ! ಜೀವನವನ್ನು ಅದೆಷ್ಟು ವ್ಯರ್ಥ ಮಾಡಿಕೊಂಡೆ.. ಎಲ್ಲವೂ ಮಾಡಬಾರದ ಕೆಲಸಗಳನ್ನೇ ಮಾಡಿದೆ. ತಿನ್ನಬಾರದವುಗಳನ್ನು ತಿಂದೆ, ಜೀವನದಲ್ಲಿ ಅದೆಷ್ಟು ನಷ್ಟ ಮಾಡಿಕೊಂಡೆ’ ಎಂದು ಪಶ್ಚಾತ್ತಾಪ ಪಡುತ್ತಾರೆ.

ಈ ರಾತ್ರಿ ಜೀವನವನ್ನು ಜೀವಿಸುವವರು “ಈ ದೇಹ ನಾನು’ ಎಂದುಕೊಳ್ಳುತ್ತಾರೆ. ತಾನು ಆತ್ಮ ಎಂಬ ವಿಷಯ ಅವರಿಗೆ ತಿಳಿಯುವುದಿಲ್ಲ. ಮರಣಿಸಿದ ನಂತರವೂ ನಮಗೆ ಇನ್ನೂ ಜೀವನವಿರುತ್ತದೆ ಎಂಬ ವಿಷಯ ಅವರಿಗೆ ಗೊತ್ತಿರುವುದಿಲ್ಲ. ಮರಣಿಸಿದ ನಂತರ ಇರುವ ಲೋಕಗಳ ಕುರಿತಾಗಲೀ ಅಥವಾ ಉನ್ನತ ಲೋಕಗಳನ್ನು ಸೇರಿಕೊಳ್ಳಬೇಕೆಂಬ ವಿಷಯವಾಗಲೀ ಅವರಿಗೆ ತಿಳಿದೇ ಇರುವುದಿಲ್ಲ. ತಾನು ಯಾವ ಕಡೆ ಲಕ್ಷ್ಯವಹಿಸಬೇಕು ಎಂಬುದು ಕೂಡ ಅವರಿಗೆ ತಿಳಿಯದು. ಹೀಗಾಗಿ ತಾನು “ದೇಹ’ ಎಂದುಕೊಂಡು ಮಾಡಬಾರದ ಕೆಲಸಗಳನ್ನು ಮಾಡಿ ಆತ್ಮಕ್ಕೆ ನಷ್ಟವನ್ನುಂಟು ಮಾಡುತ್ತಾರೆ. ಅಂದರೆ ತಮಗೆ ತಾವೇ ಹಾನಿ ಮಾಡಿಕೊಳ್ಳುತ್ತಾರೆ. ಅವು ಕಷ್ಟಗಳಿಗೂ ಗುರಿ ಮಾಡುತ್ತವೆ.

ನನ್ನ ಜೀವನದಲ್ಲಿ ಕೂಡ 53 ವರ್ಷಗಳನ್ನು ಹಾಗೆಯೇ ಕಳೆದು ಹೋದವು. ಅಂದರೆ ಪತ್ರೀಜಿಯವರು ಪರಿಚಯವಾಗುವುದಕ್ಕೆ ಮೊದಲು ರಾತ್ರಿ ಜೀವನವನ್ನೇ ಕಳೆದೆನು. ಅಲ್ಲಿಯವರೆಗೆ ಶ್ರೇಷ್ಠವಾಗಿ ಜೀವಿಸಿದೆನು ಅಂದುಕೊಂಡೆನು. ದೊಡ್ಡ ಕೆಲಸಗಳನ್ನು ಮಾಡಿದ್ದೇನೆ ಎಂದುಕೊಂಡೆ. ಆದರೆ, ಪತ್ರೀಜಿಯವರ ಮೂಲಕ “ನಾನು ದೇಹವಲ್ಲ ಆತ್ಮ’ ಎಂದು ತಿಳಿದುಕೊಂಡೆನು. ಆಶ್ಚರ್ಯಪಟ್ಟೆನು. ಆಗ ಆಲೋಚಿಸಿ ನೋಡಿದಾಗ ಪತ್ರೀಜಿಯವರು ಹೇಳಿದ್ದು ಸರಿ ಎಂಬುದು ಅರ್ಥವಾಯಿತು. ಆಗ ರಾತ್ರಿ ಜೀವನದಿಂದ ಹಗಲಿನ ಜೀವನಕ್ಕೆ ಬಂದೆನು. ನನ್ನ ಕೆಲಸಗಳು, ನನ್ನ ಮಾತುಗಳು, ಆಲೋಚನಾ ವಿಧಾನ ಎಲ್ಲವೂ ಬದಲಾಗಿಬಿಟ್ಟವು, ರಾತ್ರಿ ಜೀವನಕ್ಕೆ ಹಗಲು ಜೀವನಕ್ಕೆ ನನ್ನ ವರ್ತನೆ ಪೂರ್ತಿ ಭಿನ್ನವಾಗಿ ಬದಲಾಯಿತು, ಒಂದು ರೀತಿಯಲ್ಲಿ ಹೇಳಬೇಕೆಂದರೆ ನನ್ನಲ್ಲಿ ಬಹಳ ಬದಲಾವಣೆಯಾಯಿತು. ಹಲವರು ರಾತ್ರಿಯ ಜೀವನದಿಂದ ಹಗಲಿನ ಜೀವನಕ್ಕೆ ಬಂದರು. ಆದರೆ, ಕೆಲವರು ಸಂಧ್ಯಾ ಜೀವನದಲ್ಲಿಯೇ ಉಳಿದುಬಿಟ್ಟರು.



**ಹಳೆಯ ದೇಹವನ್ನು ಬಿಟ್ಟು ಹೊಸ ದೇಹವನ್ನು ಧರಿಸುವುದು, ನೂತನ ಮಹೋತ್ಸವವೇ ಆಗುತ್ತದೆ.ಅಂತಹ ಹೊಸ ಶರೀರವನ್ನು ಕೊಡುವ ಮರಣವು ಸಂಭವಿಸಿದರೆ ಸಂತೋಷಸುವುದಕ್ಕೆ ಬದಲು ಏಕೆ ದುಃಖಿಸುತ್ತಿರುವೆ?**

**– ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿ**

# 2. ಸಂಧ್ಯಾ ಜೀವನ

ಒಂದು ದಿನದಲ್ಲಿ ಮೂರು ಹಂತಗಳಿರುತ್ತವೆ. ರಾತ್ರಿ, ಹಗಲು, ಸಂಧ್ಯಾ. ಇಲ್ಲಿ ಮಾನವನೊಬ್ಬನ ಜ್ಞಾನ ಪರಿಧಿಯನ್ನು ಈ ಮೂರು ರೀತಿಯಲ್ಲಿ ವಿಂಗಡಿಸಲಾಗಿದೆ. ನಾವು ಗಮನಿಸಿದರೆ ರಾತ್ರಿಯಾದಾಗ ಪೂರ್ತಿ ಕತ್ತಲಾಗಿರುತ್ತದೆ. ಅದೇ ಹಗಲು ಪೂರ್ಣವಾಗಿ ಬೆಳಕಿನಿಂದ ಇರುತ್ತದೆ. ಆದರೆ, ಈ ಎರಡರ ಮಧ್ಯದಲ್ಲಿ ಸಂಧ್ಯಾ ಕೂಡ ಇರುತ್ತದೆ. ಇದನ್ನೇ ಸಂಧ್ಯಾ ಸಮಯ ಎನ್ನುತ್ತಾರೆ. ಈ ಸಂಧ್ಯಾ ಸಮಯ ಎರಡು ರೀತಿಯವು. ಮೊದಲನೆಯದು ರಾತ್ರಿ ಸಂಧ್ಯಾ ಮತ್ತೊಂದು ಹಗಲು ಸಂಧ್ಯಾ. ಇಲ್ಲಿ ಗಮನಿಸುವುದಾದರೆ ಹಗಲು ಇರುವಂತಹ ಬೆಳಕು ಹಾಗೆಯೇ ಶಾಶ್ವತವಾಗಿ ಇದ್ದುಬಿಡುತ್ತದೆಯೇ? ಇಲ್ಲ. ಅದು ನಿಧಾನವಾಗಿ ರಾತ್ರಿಯಾಗಿ ಬದಲಾಗುತ್ತದೆ. ಬೆಳಕು ಹೋಗಿ ಕತ್ತಲಾಗಿ ಬದಲಾಗಿಬಿಡುತ್ತದೆ. ಹಾಗೆಯೇ ರಾತ್ರಿಯಾಗಿ ಬದಲಾಗುವ ಸಮಯವನ್ನೇ ರಾತ್ರಿ ಸಂಧ್ಯಾ ಎನ್ನುತ್ತಾರೆ. ಹಾಗೆಯೇ ಕತ್ತಲು ಕೂಡ ಶಾಶ್ವತವಾಗಿ ಇರದು. ಆ ಕತ್ತಲು ನಿಧಾನವಾಗಿ ಕಳೆಯುತ್ತಾ ಬೆಳಕು ಬರುತ್ತದೆ. ಅಂದರೆ ಅಲ್ಲಿಯೂ ಕತ್ತಲು ನಿಧಾನವಾಗಿ ಬೆಳಕಾಗಿ ಬದಲಾಗಿಬಿಡುತ್ತದೆ. ನಿಧಾನವಾಗಿ ಹಗಲಾಗಿ ಬದಲಾಗಿಬಿಡುತ್ತದೆ. ಇದೇ ಹಗಲು ಸಂಧ್ಯಾ.

ಹಾಗಾದರೆ ಕೆಲವರನ್ನು ಯಾಕೆ ಈ ಎರಡಕ್ಕೂ ಮಧ್ಯದಲ್ಲಿರುವ ಬದಲಾಗುವ ಸಂಧ್ಯಾ ಜೀವನಕ್ಕೆ ಹೋಲಿಸುತ್ತಾರೆ? ಏಕೆಂದರೆ, ಅಜ್ಞಾನದಲ್ಲಿರುವವರು ನಿಧಾನವಾಗಿ ಎಷ್ಟೋ ಜನ್ಮಗಳನ್ನು ತೆಗೆದುಕೊಳ್ಳುತ್ತಾ ಆ ಜನ್ಮಗಳಲ್ಲಿ ಎಷ್ಟೋ ರೀತಿಯ ಅನುಭವಗಳನ್ನು ಹೊಂದುತ್ತಾ ಕಷ್ಟಗಳನ್ನು ಅನುಭವಿಸುತ್ತಾ ಕೊನೆಗೆ "ನಾನು ಇವುಗಳಿಂದ ಶಾಶ್ವತವಾಗಿ ಹೊರಬರಬೇಕು' ಎಂದು ನಿರ್ಣಯಿಸಿಕೊಳ್ಳುತ್ತಾರೆ. ಈ ನೋವುಗಳಿಂದ ಹೇಗಾದರೂ ಹೊರಬರಬೇಕು ಎನ್ನುವ ನಿರ್ಣಯಕ್ಕೆ ಬರುತ್ತಾರೆ. ಅದಕ್ಕಾಗಿ ಒಬ್ಬ ಸದ್ಗುರುವನ್ನು ಆಶ್ರಯಿಸುತ್ತಾರೆ ಹಾಗೆಯೇ ಸದ್ಗುರುವನ್ನು ಆಶ್ರಯಿಸಿದಾಗ ಆ ಗುರುವು ಅವರಿಗೆ "ನೀನು ದುಃಖದಿಂದ ಶಾಶ್ವತವಾಗಿ ಹೊರ ಬರಬೇಕು ಎಂದರೆ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು. ಜ್ಞಾನಿಯಾಗಬೇಕು' ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಜ್ಞಾನ ಹೊಂದಿದರೆ ನಿನಗೆ ದುಃಖವಿದ್ದರೂ ದುಃಖಿಸುವುದಿಲ್ಲ. ಆ ಜ್ಞಾನದಿಂದ ನಿನ್ನ ಕರ್ಮಗಳೆಲ್ಲ ದಗ್ಧವಾಗಿ ಬಿಡುತ್ತವೆ. ಕರ್ಮಗಳು ಇಲ್ಲದ ಸ್ಥಿತಿ ನಿನಗೆ ಬರುತ್ತದೆ. ಅಂತಹ ಜ್ಞಾನವನ್ನು ನೀನು ಸಂಪಾದಿಸಿಕೊಳ್ಳಬೇಕು ಅಂದರೆ ಆಧ್ಯಾತ್ಮಿಕ ತ್ರಿರತ್ನಗಳನ್ನು ಪಾಲಿಸಬೇಕು ಎಂದು ಹೇಳುತ್ತಾರೆ.

ಆಧ್ಯಾತ್ಮಿಕ ತ್ರಿರತ್ನಗಳು ಎಂದರೆ ಸಾಧನೆ, ಸ್ವಾಧ್ಯಾಯ, ಸಜ್ಜನ ಸಾಂಗತ್ಯ.

1) ಶ್ವಾಸದ ಮೇಲೆ ಗಮನವಿಟ್ಟು ತೀವ್ರವಾಗಿ ಧ್ಯಾನ ಮಾಡುತ್ತಾ ಸಾಧನೆ ಮಾಡುವುದು.

2) ಸ್ವಾಧ್ಯಾಯ ಎಂದರೆ ಆತ್ಮ ಜ್ಞಾನಿಗಳು ಬರೆದ ಆತ್ಮಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದುತ್ತಾ ಇರಬೇಕು.

3) ಈ ಜ್ಞಾನವನ್ನು ಬೋಧಿಸುವವರೊಂದಿಗೆ ಸಾಂಗತ್ಯ ಮಾಡುತ್ತಾ, ಅದರ ಸಂದೇಶಗಳನ್ನು ಕೇಳಬೇಕು ಅದನ್ನೇ ಸಜ್ಜನ ಸಾಂಗತ್ಯ ಎಂದು ಕರೆಯುತ್ತಾರೆ. ಅವಕಾಶ ದೊರಕಿದಾಗ ಅವರೊಂದಿಗೆ ಸಮಯ ಕಳೆಯಲು ಪ್ರಯತ್ನಿಸಬೇಕು. ಅವರೊಂದಿಗೆ ಇರುವಾಗ ನಿಮಗೆ ತಿಳಿಯದ ಎಷ್ಟೋ ವಿಷಯಗಳು ಅವರಿಂದ ತಿಳಿದುಕೊಳ್ಳಬಲ್ಲಿರಿ. ನಿಮ್ಮ ಲೋಪಗಳನ್ನು, ನಿಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳುತ್ತೀರಿ. ಆ ಗುರುವಿನಿಂದ ಬರುವ ಪ್ರತಿ ಮಾತು ನಿಮ್ಮ ಜ್ಞಾನವನ್ನು ಹೆಚ್ಚಿಸಲು ಬಹಳ ಸಹಕಾರಿಯಾಗುತ್ತದೆ.

ಹಾಗೆಯೇ ಈ ಜ್ಞಾನಮಾರ್ಗದಲ್ಲಿ ನೀವು ಮಾಡಬಹುದಾದಷ್ಟು ಸೇವೆಯನ್ನು ಮಾಡಬೇಕು. ಅಂದರೆ ಜ್ಞಾನವನ್ನು ಸಂಪಾದಿಸಿಕೊಳ್ಳುವುದಷ್ಟೇ ಅಲ್ಲದೆ, ನೀವು ಸಂಪಾದಿಸಿಕೊಂಡ ಜ್ಞಾನವನ್ನು ಸಾಧ್ಯವಾದಷ್ಟು ಅವಕಾಶ ಇರುವಾಗ ಇತರರಿಗೆ ಬೋಧಿಸುತ್ತಾ ಇರಬೇಕು. ಇದೇ ಅದ್ಭುತವಾದ ಸೇವೆ. ಎಲ್ಲದಕ್ಕಿಂತಲೂ ಶ್ರೇಷ್ಠ ಸೇವೆ. ಅದರೊಂದಿಗೆ ಈ ಜ್ಞಾನವು ಎಲ್ಲರಿಗೂ ದೊರಕುವುದಕ್ಕೆ ನೀವು ನಿಮ್ಮ ಸ್ಥಾಯಿಯಲ್ಲಿ ಯಾವುದನ್ನು ಮಾಡಬಲ್ಲಿರೋ ಅದನ್ನು ಮಾಡುತ್ತಾ ಇರಬೇಕು.

ಹೀಗೆ ಅಜ್ಞಾನದಲ್ಲಿರುವವರ ಅಜ್ಞಾನವನ್ನು ತೊಲಗಿಸಿ ಜ್ಞಾನವಂತರನ್ನಾಗಿ ಮಾಡುವುದಕ್ಕೆ ಯಾವುದೋ ಒಂದು ವಿಧವಾಗಿ ನಾವು ಸಹಾಯ ಮಾಡಬೇಕು ಎಂದು ಗುರುಗಳು ಹೇಳುತ್ತಾರೆ.

ಹಾಗೆಯೇ ಅಜ್ಞಾನದಲ್ಲಿರುವವರು ಪತ್ರೀಜಿಯವರ ಮಾರ್ಗದೊಳಗೆ, ನನ್ನ ಬಳಿಗೆ, ಅಮ್ಮನ ಬಳಿಗೆ ಬಂದು ಜ್ಞಾನವನ್ನು ಹೊಂದುತ್ತಾ ಇರುವುದರಿಂದ ಅವರಲ್ಲಿ ಎಷ್ಟೋ ಬದಲಾವಣೆಗಳು ಬರುತ್ತಿವೆ. ಇನ್ನೂ ಬರಬೇಕಾದವುಗಳು ಎಷ್ಟೋ ಇವೆ. ಅಂದರೆ ಹೀಗೆ ಇದ್ದಂತವರೆಲ್ಲ ಸಂಧ್ಯಾ ಜೀವನದಲ್ಲಿ ಇದ್ದಂತೆಯೇ. ಇವರೆಲ್ಲರದ್ದು ಸಂಧ್ಯಾ ಜೀವನವೇ.

ಅಷ್ಟೇ ಅಲ್ಲ ಆ ಗುರುವು ಬೋಧಿಸಿದ ಆ ಜ್ಞಾನವು ಇವರಿಗೆ ಪೂರ್ತಿಯಾಗಿ ಅರ್ಥವಾಗದು. ಅರ್ಥವಾಗಿ ಅರ್ಥವಾಗದಂತೆ ಇರುತ್ತದೆ. ಇವರ ಜೀವನವು ಹೇಗಿರುತ್ತದೆ ಎಂದರೆ ಕೆಲವರು ಯಾವುದಾದರು ಹಗ್ಗವನ್ನು ನೋಡಿ ಹಾವು

ಎಂದುಕೊಳ್ಳುತ್ತಾರೋ ಹಾಗೆ. ಅದು ಹಗ್ಗವೋ? ಅಥವಾ ಹಾವೋ? ಎಂಬುದು ಸ್ಪಷ್ಟವಾಗಿ ತಿಳಿಯದೆ ಗೊಂದಲದಲ್ಲಿ ಬೀಳುತ್ತಾರೆ!. ಹಾಗೆ ಸಂಧ್ಯಾ ಜೀವನದಲ್ಲಿ ಇರುವವರಿಗೆ ಆ ಗುರುಗಳು ಹೇಳುವಂತಹ ಜ್ಞಾನಪರವಾದ ವಿಷಯಗಳು ಅರ್ಥವಾಗದೆ, ಅವು ಸರಿಯಾದವೇ..? ಅಲ್ಲವೇ? ನನ್ನ ದುಃಖವನ್ನು ಪೂರ್ತಿಯಾಗಿ ತೊಲಗಿಸಬಲ್ಲವೇ..? ನಾನು ಅಂದುಕೊಂಡ ಸ್ಥಾಯಿಗೆ ನಾನು ಹೋಗಬಲ್ಲೇನೆ.. ಇಲ್ಲವೇ..? ಎಂಬ ಅನುಮಾನದಿಂದ ಇರುತ್ತಾರೆ.

ಆದ್ದರಿಂದ ಇಂತಹವರಲ್ಲಿ ಕೆಲವರು ಅವರು ಮಾಡುವ ಸಾಧನೆಯ ಮೇಲೆ ಪಾಲಿಸಬೇಕಾದ ನಿಯಮಗಳ ಮೇಲೆ ಆಚರಿಸಬೇಕಾದದ್ದರ ಮೇಲೆ ದೃಷ್ಟಿಯನ್ನು ಇಡದೆ, ನಾನು ಅಂದುಕೊಂಡದ್ದು ನಡೆಯಲಿಲ್ಲವಲ್ಲ ಎಂಬ ಭ್ರಮೆಯಿಂದ ಇನ್ನೊಬ್ಬ ಗುರುವನ್ನು ಆಶ್ರಯಿಸುತ್ತಾರೆ.

ಇಂಥವರು ಪೂರ್ತಿ ಸಂಧ್ಯಾ ಜೀವನದಲ್ಲಿ ಇದ್ದಂತೆ. ಅದೇ ನಾನು ಜ್ಞಾನವನ್ನು ಹೊಂದುತ್ತೇನೆ, ನಾನು ಸಾಧಿಸುತ್ತೇನೆ ಎಂಬ ನಂಬಿಕೆಯಿಂದ ತೀವ್ರವಾಗಿ ಸಾಧನೆ ಮುಂದುವರಿಸಿದರೆ ಅವರು ಈ ಸಂಧ್ಯಾ ಜೀವನದಿಂದ ಹೊರ ಬರುತ್ತಿರುವವರ ಕೆಳಗೆ ನಾವು ಲೆಕ್ಕ ಹಾಕಬಹುದು.

ಏಕೆಂದರೆ ಬಹಳ ಜನರು ಈ ಧ್ಯಾನ ಮಾರ್ಗದೊಳಗೆ ಬರುತ್ತಾರೆ. ಅಲ್ಲಿ ಗುರುವು ವಿಗ್ರಹ ದೇವರಲ್ಲ, ಆತ್ಮವೇ ದೇವರು ಎಂದು ಹೇಳುತ್ತಾರೆ. ಆದರೆ, ಚಿಕ್ಕಂದಿನಿಂದ ಪೂಜೆಗಳನ್ನು ಮಾಡುವುದರಿಂದ ಎಲ್ಲರೂ ಅದನ್ನೇ ಮಾಡುತ್ತಿರುವುದರಿಂದ ಅದನ್ನು ಬಿಟ್ಟರೆ ಏನಾಗುತ್ತದೋ ಎಂಬ ಭಯದಿಂದ ವಿಗ್ರಹ ದೇವರಲ್ಲ ಎಂದು ಗುರು ಹೇಳಿದರೂ ಅದು ಸ್ಪಷ್ಟವಾಗಿ ಅರ್ಥವಾಗದೆ ಪೂಜೆಗಳನ್ನು ಬಿಡಲಾರರು. ಇವರು ಸಂಧ್ಯಾ ಜೀವನದಲ್ಲಿ ಇದ್ದಂತೆ ಲೆಕ್ಕ.

ಹಾಗೆಯೇ ಆ ಗುರುಗಳು ಮಾಂಸವನ್ನು ತಿನ್ನಬಾರದು ಎಂದು ಹೇಳುತ್ತಾರೆ. ಆದರೆ, ಇವರು ಚಿಕ್ಕಂದಿನಿಂದ ಮಾಂಸವನ್ನು ತಿನ್ನುವ ಅಭ್ಯಾಸ ಮಾಡಿಕೊಂಡಿದ್ದರಿಂದ, ಅದರ ರುಚಿಗೆ ಚೆನ್ನಾಗಿ ಹೊಂದಿಕೊಂಡಿರುವುದರಿಂದ, ತನ್ನ ಕುಟುಂಬದವರು ಹಾಗೂ ಸುತ್ತಮುತ್ತಲಿನ ಎಲ್ಲರೂ ಅದನ್ನೇ ತಿನ್ನುತ್ತಾ ಇರುವುದರಿಂದ, ಡಾಕ್ಟರ್‌ಗಳು. ಇನ್ನೂ ಕೆಲವರು, ದೊಡ್ಡವರು ಮಾಂಸ ತಿನ್ನುವುದು ಬಲವೆಂದು ಹೇಳುತ್ತಾ ಇರುವುದರಿಂದ ಗುರುವು ಹೇಳಿದರೂ ಕೂಡ ಅವರಿಗೆ ಸ್ಪಷ್ಟವಾಗಿ ಅರ್ಥವಾಗದೆ ಬಿಡಲಾರರು. ಇಂಥವರು ಸಂಧ್ಯಾ ಜೀವನದಲ್ಲಿ ಇದ್ದಂತೆಯೇ ಲೆಕ್ಕ.

ಹಾಗೆಯೇ ಆ ಗುರುಗಳು ನೀನು ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು. ಜ್ಞಾನ

ಸಂಪಾದಿಸಬೇಕೆಂದರೆ ಸತ್ಯವನ್ನು ತಿಳಿದುಕೊಳ್ಳಬೇಕು ಎಂದು ಹೇಳುತ್ತಾರೆ. ಆ ಸತ್ಯ ಏನೆಂದರೆ ಈ ದೇಹವೇ ನಾನು ಎಂಬ ಭಾವದಿಂದಲೇ ಜೀವಿಸುತ್ತಿರುವೆ, ನೀನು ಮಾಡುವ ಕೆಲಸಗಳೆಲ್ಲವೂ ದೇಹಕ್ಕಾಗಿಯೇ ಮಾಡಿದೆ. ಆದರೆ, "ನೀನು ದೇಹವಲ್ಲ, ನೀನು ಆತ್ಮ" ಎಂದು ಗುರುಗಳು ಹೇಳುತ್ತಾರೆ. ಈಗಿನಿಂದಾದರೂ ಆತ್ಮದ ಲಾಭಕ್ಕಾಗಿ ಪ್ರಯತ್ನಿಸು ಆತ್ಮಕಾಗಿ ಜೀವಿಸು ಎಂದು ಹೇಳುತ್ತಾರೆ. ಆತ್ಮಕ್ಕೆ ಲಭಿಸುವ ಜ್ಞಾನವನ್ನು ಹೇಗೆ ಹೊಂದಬೇಕು ಎನ್ನುವುದನ್ನು ಹೇಳುತ್ತಾರೆ.

ಆದರೆ, ಅವರಿಗೆ ಇದು ಸ್ಪಷ್ಟವಾಗಿ ಅರ್ಥವಾಗದೆ ಇರುವುದರಿಂದ ಎಷ್ಟು 'ನೀನು ಆತ್ಮ'ವೆಂದು ಹೇಳಿದರೂ.. ನಾನು ದೇಹ ಎನ್ನುವಂತೆಯೇ ಜೀವಿಸುತ್ತಾ ಇರುತ್ತಾ–ರೆ. ದೇಹಕ್ಕೆ ಪ್ರಾಮುಖ್ಯತೆ ಕೊಡುತ್ತಾರೆ, ದೇಹದ ಲಾಭಕ್ಕೆ ಕೃಷಿ ಮಾಡುತ್ತಿರುತ್ತಾರೆ. ಕೇಳಿಸಿಕೊಂಡಾಗ ಸರಿಯಾದದ್ದೇ ಎಂದುಕೊಳ್ಳುತಾರೆ. ಮತ್ತೆ ದೇಹವೆಂಬ ಭ್ರಾಂತಿಯಲ್ಲಿ ಬಿದ್ದು ಬಿಡುತ್ತಾರೆ. ಇದು ಕೂಡ ಸಂಧ್ಯಾ ಜೀವನವೊಂದರ ಲಕ್ಷಣವೇ. ಅಷ್ಟೇ ಅಲ್ಲ ಕೆಲವನ್ನು ಆಚರಿಸಬಲ್ಲವರಾಗಿದ್ದಾರೆ. ಕೆಲವನ್ನು ಆಚರಿಸಲಾರದೆ ಹೋಗುತ್ತಿದ್ದಾರೆ. ಇದು ಕೂಡ ಸಂಧ್ಯಾ ಜೀವನವೇ! ಪೂರ್ತಿಯಾಗಿ ಬದಲಾವಣೆ ಬಂದಾಗಲೇ ಹಗಲಿನ ಜೀವನಕ್ಕೆ ಬಂದಂತೆ.

ನೋಡಿ 23 ವರ್ಷಗಳ ಕೆಳಗೆ ಪತ್ರೀಜಿಯವರ ಪರಿಚಯವಾಗುವುದಕ್ಕೆ ಮೊದಲು ನಾನು ವೆಂಕಟೇಶ್ವರ ಸ್ವಾಮಿಯವರ ವೀರಭಕ್ತನು. ಎಲ್ಲರೂ ಗುಡಿಗೆ ಹೋಗಿ ಪೂಜೆಗಳನ್ನು ಮಾಡಿ ಬರುತ್ತೀರಿ, ಹರಕೆಗಳನ್ನು ಹೊತ್ತುಕೊಳ್ಳುತ್ತಾ ಇರುತ್ತೀರಿ, ಆದ–ರೆ, ನಾನು ಸ್ವಯಂ ಆಗಿ ವೆಂಕಟೇಶ್ವರ ಸ್ವಾಮಿಯ ಮಂದಿರವನ್ನೇ ನಿರ್ಮಿಸಿದೆ. ಅಂದರೆ ಅಷ್ಟು ವೀರಭಕ್ತನು. ಚಿಕ್ಕವನಾಗಿರುವಾಗಿನಿಂದ ಪ್ರತಿವರ್ಷ ಹೆಚ್ಚು ಕಡಿಮೆ ಒಂದು ಬಾರಿಯೋ ಎರಡು ಬಾರಿಯೋ ತಿರುಮಲಕ್ಕೆ ಹೋಗಿ ಬರುತ್ತಿದ್ದೆನು.

ಅಷ್ಟು ಭಕ್ತಿಯಲ್ಲಿ ಮುಳುಗಿ ಹೋಗಿರುವ ನನಗೆ ಪತ್ರೀಜಿಯವರು ಒಂದು ಬಾರಿ "ವಿಗ್ರಹ ದೇವರಲ್ಲ" ಎಂದರು. ತಲೆ ತಿರುಗಿದಂತಾಯಿತು. ನನಗೆ ಪತ್ರೀಜಿಯವರು ಹೇಳಿದ ಎಲ್ಲವೂ ಸಹಜವಾಗಿ ಸಮಾಜದಲ್ಲಿ ಮಾಡುತ್ತಿರುವುದಕ್ಕೆ ವಿರುದ್ಧವಾಗಿರುತ್ತದೆ. ಬೇಗನೆ ಯಾರೂ ಒಪ್ಪಿಕೊಳ್ಳುತ್ತಿರಲಿಲ್ಲ. ಆದರೆ, ನಾನು ನಂಬದೇ ಇರಲಿಲ್ಲ. ಅಂತಹ ಮಹನೀಯನು ಹೇಳುತ್ತಿದ್ದಾನೆಂದರೆ ಇದರಲ್ಲಿ ಏನೋ ಇರುತ್ತದೆ ಎಂಬ ಉದ್ದೇಶದಿಂದ ಅವುಗಳ ಕುರಿತು ಚೆನ್ನಾಗಿ ಅಧ್ಯಯನ ಮಾಡಿದೆನು. ಯಾವ ವಿಷಯಗಳಾದರೂ ಈಗ ವಿರುದ್ಧವಾಗಿ ಕಾಣಿಸುತ್ತಿವೆಯೋ ಅವುಗಳ ಕುರಿತು ತುಂಬಾ ಅಧ್ಯಯನ ಮಾಡಿದೆನು.

ನಾನು ಬರೆದಿರುವಂತಹ ಪುಸ್ತಕಗಳೆಲ್ಲವು ಕೂಡ ಅದರೊಳಗಿಂದ ತಿಳಿದುಕೊಂಡವೇ. ಆ ಪುಸ್ತಕಗಳೆಲ್ಲವನ್ನು ಓದಿದರೆ ನಿಮ್ಮ ಸಂದೇಹಗಳೆಲ್ಲ

ಪೂರ್ತಿಯಾಗಿ ನಿವೃತ್ತಿಯಾಗಿಬಿಡುತ್ತವೆ. ಹಾಗೆಯೇ ಎಷ್ಟೋ ಪುಸ್ತಕಗಳು ಉಪನಿಷತ್ತುಗಳನ್ನು ಓದಿದಾಗ ಅರ್ಥವಾಯಿತು. ಉಪನಿಷತ್ತುಗಳಲ್ಲಿ, ವೇದಗಳಲ್ಲಿ ಆತ್ಮನೇ ದೇವರೆಂದು ಹೇಳಲ್ಪಟ್ಟಿದೆ. ಆದರೆ, ಎಲ್ಲಿಯೂ ವಿಗ್ರಹದ ಪ್ರಸ್ತಾಪವೇ ಇಲ್ಲ. ಅನ್ನಮಾಚಾರ್ಯರು ಹೇಳಲಿಲ್ಲವೇ? ಮಾಡಲಿಲ್ಲವೇ? ಭಕ್ತನಲ್ಲವೇ? ಎನ್ನುತ್ತಾರೆ. ಅನ್ನಮಾಚಾರ್ಯರೇ ಸ್ಪಷ್ಟವಾಗಿ ಹೇಳಿದ್ದಾರೆ. ಬ್ರಹ್ಮವೊಂದೇ ಪರಬ್ರಹ್ಮವೊಂದೇ ಎಂದು. ಆತನು ನಿಮ್ಮ ಅಂತರಂಗದಲ್ಲಿಯೇ ಇದ್ದಾನೆ ಎಂದಿದ್ದಾರೆ. ಎಲ್ಲರಿಗೂ ಶ್ರೀಹರಿಯೇ ಅಂತರಾತ್ಮವೆಂದು ಹೇಳಿದ್ದಾರೆ. ಆಗ ಇನ್ನೂ ಚೆನ್ನಾಗಿ ಅರ್ಥವಾಗಿ ಧೈರ್ಯ ಕೂಡ ಬಂದಿತು. ಆಗಿನಿಂದ ನಾನು ತಿರುಮಲಕ್ಕೆ ಹೋಗಲಿಲ್ಲ. ಏಕೆಂದರೆ ಆ ಶ್ರೀಹರಿಗಾಗಿ ತಿರುಮಲಕ್ಕೆ ವರ್ಷಕ್ಕೆ ಒಂದೇ ಬಾರಿ ಹೋಗುತ್ತಿದ್ದೆನೇ ಹೊರತು ಈಗ ಈ ಸತ್ಯ ಅರ್ಥವಾದ ನಂತರ ಪ್ರತಿದಿನ ಗಂಟೆಗಟ್ಟಲೆ ಆತನ ಮೇಲೆ ದೃಷ್ಟಿ ಇಡುತ್ತಿದ್ದೇನೆ.

ಹಾಗೆಯೇ ನಾನು ಮೊದಲು ರಾತ್ರಿ ಜೀವನದಲ್ಲಿ ಇದ್ದರೂ ನಿಧಾನವಾಗಿ ಸಂಧ್ಯಾ ಜೀವನದೊಳಗೆ, ಆನಂತರ ಕೃಷಿಯಿಂದ ಹಗಲು ಜೀವನದೊಳಗೆ ಕೂಡ ಬರುವುದು ನಡೆಯಿತು. ಆದರೆ, ತುಂಬಾ ಜನರಿಗೆ ಇನ್ನೂ ಸಂದೇಹ, ಭಯವೇ ಇದೆ. ದೀಪವನ್ನಾದರೂ ಇಡಬೇಕಲ್ಲವೇ ಎನ್ನುತ್ತಾರೆ.

ಹೀಗೆ ಸಂಧ್ಯಾ ಜೀವನದಲ್ಲಿ ಜ್ಞಾನವನ್ನು ಹೊಂದುತ್ತಾರೆ. ಜ್ಞಾನದ ಮೇಲೆ ಆಸಕ್ತಿ ಇದೆ. ಆದರೆ. ಆ ಜ್ಞಾನ ಕುರಿತು ಹೇಳಿದ ವಿಷಯಗಳು ಪೂರ್ತಿಯಾಗಿ ಅರ್ಥವಾಗದೆ ಇರುವುದರಿಂದ, ಇಲ್ಲವೇ ಭಯದಿಂದಾಗಿ ಆಚರಣೆ ಇರದು. ಆದ್ದ-ರಿಂದ ತಿಳಿದುಕೊಂಡರೂ ಫಲವನ್ನು ಹೊಂದಲಾಗದೆ ಹೋಗುತ್ತಿದ್ದಾರೆ. ಎಲ್ಲ ಗೊತ್ತು ಆದರೆ, ವರ್ತನೆಯಲ್ಲಿ ಬದಲಾವಣೆ ಮಾತ್ರ ಬಾರದು. ಮತ್ತೆ ತಿಳಿದಿದ್ದರು ಕೂಡ ಆಚರಿಸದೇ ಹೋದರೆ, ಬದಲಾವಣೆಯನ್ನು ತಂದುಕೊಳ್ಳದೇ ಇದ್ದರೆ ಸಂಧ್ಯಾ ಜೀವನದಲ್ಲಿ ಇದ್ದಂತೆಯೇ.

ಆದ್ದರಿಂದ ವಿವೇಕವಿರುವವರು ಸದ್ಗುರು ಹೇಳಿದಾಗ ತೆಗೆದು ಹಾಕಬಾರದು. ನಿಮಗೆ ಇನ್ನೇನಾದರೂ ಸಂದೇಹಗಳಿದ್ದರೆ ಅವುಗಳನ್ನು ಪರಿಹರಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಎಷ್ಟೋ ಮಂದಿ ಯೋಗಿಗಳು, ಮಹಾನುಭಾವರು, ಮಹರ್ಷಿಗಳು ಅವರ ಜೀವನವನ್ನೇ ಸವೆಸಿ ಎಷ್ಟೋ ಸತ್ಯಗಳನ್ನು ತಿಳಿದುಕೊಂಡು ಎಷ್ಟೋ ಗ್ರಂಥಗಳನ್ನು ಕೊಟ್ಟಿದ್ದಾರೆ. ಭಗವದ್ಗೀತೆಯಾಗಲಿ, ಯೋಗವಾಶಿಷ್ಟವಾಗಲಿ ಇವೆಲ್ಲವನ್ನೂ ನೀವು ಚೆನ್ನಾಗಿ ಅಧ್ಯಯನ ಮಾಡಿದರೆ ಸಂಧ್ಯಾ ಜೀವನದಿಂದ ಹೊರಬಂದು ಹಗಲಿನ ಜೀವನದೊಳಗೆ ಬರುತ್ತೀರಿ.

# 3. ಹಗಲಿನ ಜೀವನ

ಹಗಲು ಜೀವನ ಅಂದರೆ ಅದು ಪೂರ್ಣವಾಗಿ ಜ್ಞಾನವನ್ನು ಹೊಂದಿದವರ ಜೀವನ. ನೀವು ಪೂರ್ಣ ಜ್ಞಾನಿಗಳಾದರೆ ಗುರು ಹೇಳಿದ ವಿಷಯಗಳ ಮೇಲೆ ಶ್ರದ್ಧೆ ತೋರಿಸುತ್ತೀರಿ. ಶ್ರದ್ಧೆಯಿಂದ ಕೇಳುತ್ತೀರಿ, ಬರೆದುಕೊಳ್ಳುತ್ತೀರಿ, ಮನನ ಮಾಡಿಕೊಳ್ಳುತ್ತೀರಿ. ಹಾಗೆಯೇ ಮನನ ಮಾಡಿಕೊಳ್ಳುವುದರಿಂದ ಅರ್ಥ ಕೂಡ ಮಾಡಿಕೊಳ್ಳುತ್ತೀರಿ. ಅರ್ಥ ಮಾಡಿಕೊಂಡು ಆಚರಿಸುತ್ತೀರಿ.

ಆದ್ದರಿಂದ ಇವರು ಪೂರ್ಣ ಜ್ಞಾನಿಗಳಾಗಿ ಮಾಡಬೇಕಾದದ್ದನ್ನೇ ಮಾಡುತ್ತಾರೆ. ಮಾತನಾಡಬೇಕಾದದ್ದನ್ನೇ ಮಾತನಾಡುತ್ತಾರೆ. ಆಲೋಚಿಸಬೇಕಾದದ್ದನ್ನೇ ಆಲೋಚಿಸುತ್ತಾರೆ. ಶ್ರದ್ಧೆಯಿಂದ ಗುರುವನ್ನು ಅನುಸರಿಸುವುದರಿಂದ, ಧ್ಯಾನ ಸಾಧನೆ ತೀವ್ರವಾಗಿ ಮಾಡುವುದರಿಂದ ಇವರ ಜ್ಞಾನ ಅಪಾರವಾಗಿ ಬೆಳೆಯುತ್ತದೆ. ಅಗ್ನಿಯಂತೆ ಪ್ರಜ್ವಲಿಸುತ್ತದೆ. ಅಂತಹ ಜ್ಞಾನಾಗ್ನಿಯಲ್ಲಿ ಇವರು ಕರ್ಮಗಳನ್ನು ಕೂಡ ದಗ್ಧ ಮಾಡಿಕೊಳ್ಳುತ್ತಾರೆ. ಮುಕ್ತಿಯನ್ನು ಮೋಕ್ಷವನ್ನು ಕೂಡ ಹೊಂದುತ್ತಾರೆ.

ಈ ಮೂರು ರೀತಿಯವರ ಜೀವನದ ಕುರಿತು ಪತ್ರೀಜಿಯವರು ಏನು ಹೇಳಿದ್ದಾರೆ ಎಂದರೆ. ಅಜ್ಞನು, ಅಲ್ಪಜ್ಞನು, ವಿಜ್ಞನು ಎಂದಿದ್ದಾರೆ.

ಅಜ್ಞನು ಎಂದರೆ ರಾತ್ರಿ ಜೀವನವನ್ನು ಜೀವಿಸುವವರು. ಅಲ್ಪಜ್ಞನು ಅಂದರೆ ಸಂಧ್ಯಾ ಜೀವನವನ್ನು ಜೀವಿಸುವವರು. ವಿಜ್ಞನು ಅಂದರೆ ಹಗಲು ಜೀವನವನ್ನು ಜೀವಿಸುವವರು.

ಹಾಗಾಗಿ ಪತ್ರೀಜಿಯವರು ಅಜ್ಞಾನದಲ್ಲಿರುವವರ ಕುರಿತು, ಪೂರ್ತಿಯಾಗಿ ಜ್ಞಾನವನ್ನು ಹೊಂದಿದವರ ಕುರಿತು, ಹಾಗೆಯೇ ವಿಶೇಷವಾಗಿ ಜ್ಞಾನವನ್ನು ಹೊಂದಿದವರ ಕುರಿತು ಹೇಳಿದ್ದಾರೆ. ಅವರು ಕೊಟ್ಟಿರುವಂತಹ ವಿವರಣೆಗಳನ್ನು ತಿಳಿದುಕೊಳ್ಳುತ್ತಾ, ಅದನ್ನು ಇನ್ನೂ ನಾವು ಆಳವಾಗಿ ವಿಶ್ಲೇಷಿಸಿಕೊಳ್ಳೋಣ. ಅವರು ಏನು ಹೇಳಿದ್ದಾರೆ ಎಂದರೆ..

1) ಅಜ್ಞನು ಎಂದರೆ ಅಜ್ಞಾನದಲ್ಲಿರುವವನು. ಈ ಶರೀರವೇ ನಾನು ಎನ್ನುವಂತೆ ಜೀವಿಸುವವನು ಶರೀರದ ಸುಖಗಳಿಗಾಗಿಯೇ ಜೀವನವಿದೆ ಎನ್ನುವಂತೆ ಜೀವಿಸುವವನು.

2) ಅಲ್ಪಜ್ಞನು ಅಂದರೆ ಕೆಲವನ್ನು ತಿಳಿದುಕೊಳ್ಳುತ್ತಾರೆ. ಅಂದರೆ ಈ ಶರೀರ ನಾನಲ್ಲ ಆತ್ಮನೇ ನಾನು ಎಂಬುದನ್ನು ತಿಳಿದುಕೊಳ್ಳುತ್ತಾರೆ. ಹೀಗೆ

ತಿಳಿದುಕೊಂಡರೂ ಈ ಶರೀರವೇ ನಾನು ಎನ್ನುವಂತೆ ಜೀವಿಸುತ್ತಾರೆ.

ಪತ್ರೀಜಿಯವರ ಪರಿಚಯವಾಗುವುದಕ್ಕೂ ಮೊದಲು ನಮ್ಮ ಜೀವನವನ್ನು, ಪರಿಚಯವಾದ ಮೇಲೆ ನಮ್ಮ ಜೀವನವನ್ನು ಗಮನಿಸಿದರೆ ಪೂರ್ಣವಾಗಿ ಬದಲಾಗಿ ಹೋಗಿದೆ. ನಮ್ಮ ಕುಟುಂಬ ಸದಸ್ಯರು, ಸ್ನೇಹಿತರು, ಪರಿಚಯಸ್ತರೇ ಅಲ್ಲ ಎಲ್ಲರೂ ಆಶ್ಚರ್ಯವಾಗುವಂತೆ ನಮ್ಮಲ್ಲಿ ಬದಲಾವಣೆ ಬಂದಿದೆ. ಮತ್ತೆ ಏಕೆ ಹಾಗೆ ಬದಲಾಯಿತೆಂದರೆ, ಪತ್ರೀಜಿಯವರು ಪರಿಚಯವಾದ ಬಳಿಕ ಅವರು ಏನು ಹೇಳಿದ್ದಾರೆ ಎಂದರೆ "ನೀನು ದೇಹವಲ್ಲ' ಎಂದರು.

ಇದೇನಿದು ಈ ದೇಹಕ್ಕೆ ಒಂದು ಹೆಸರು ಇಟ್ಟುಕೊಂಡಿದ್ದೇನೆ. ಆ ಹೆಸರಿಗೆ ಹೆಸರು ಬರಬೇಕೆಂದು ಎಷ್ಟೋ ಶ್ರಮಿಸುತ್ತಿದ್ದೇನೆ. ಅಂತಹ ಈ ದೇಹ ನಾನು ಅಲ್ಲ ಎನ್ನುತ್ತಿದ್ದಾರಲ್ಲ ಇವರು ಎಂದು ಆಶ್ಚರ್ಯಪಟ್ಟೆನು. ಹಾಗಾದರೆ ನಾನು ಯಾರು? ಎಂದು ಕೇಳಿದೆನು. ಆಗ ಅವರು "ನೀನು ಆತ್ಮವಯ್ಯ" ಎಂದರು. ಇನ್ನೂ ಆಶ್ಚರ್ಯವಾಯಿತು. ಆತ್ಮ ಎಂಬುದನ್ನು ಯಾವತ್ತೂ ಕೇಳಿಸಿಕೊಂಡಿಲ್ಲ. ಅವರು ಹೇಳಿರುವುದು ಎಷ್ಟರವರೆಗೆ ಸರಿ ಎಂದು ಎಷ್ಟೋ ಪುಸ್ತಕಗಳನ್ನು ಓದಿ, ಮಹನೀಯರ ವಿಡಿಯೋಗಳನ್ನು ಕೇಳಿ ಪತ್ರೀಜಿಯವರು ಹೇಳಿದ್ದು ಸತ್ಯವೆಂದು ತಿಳಿದುಕೊಂಡೆನು. ಆಗ ನನ್ನ ಆಲೋಚನಾ ವಿಧಾನವೇ ಬದಲಾಯಿತು.

ವಿಚಾರಣೆಯ ಮೂಲಕ ನಾನು ದೇಹವಲ್ಲ ಆತ್ಮವೆಂದು ನಿರ್ಧರಿಸಿಕೊಂಡೆನು. ಮತ್ತೆ ಆತ್ಮವಾದ ನಾನು ಇಷ್ಟು ದಿನ ದೇಹಕ್ಕೆ ಎಷ್ಟು ಪ್ರಾಮುಖ್ಯತೆ ಕೊಟ್ಟೆನು, ದೇಹವನ್ನು ಸುಖಪಡಿಸುವುದಕ್ಕೆ ಹಗಲು-ರಾತ್ರಿ ಕಷ್ಟಪಟ್ಟು ಎಷ್ಟೋ ಹಣವನ್ನು ಸಂಪಾದಿಸಿದೆನು. ದೇಹವನ್ನು ಎಸಿಯಲ್ಲಿ ಮಲಗಿಸಿ ನನಗಿಂತ ಅದೃಷ್ಟವಂತನು ಇಲ್ಲವೆಂದು ಭಾವಿಸಿದೆನು. ತರಹೇವಾರಿ ಪದಾರ್ಥಗಳನ್ನು ತಿನ್ನಿಸಿ ಅದನ್ನು ಎಷ್ಟೋ ತೃಪ್ತಿಪಡಿಸಿದೆನು ಎಂದುಕೊಂಡು ತೃಪ್ತಿಪಟ್ಟೆನು.

ಈ ಶರೀರಕ್ಕೆ ಹೊಗಳಿಕೆಗಳು ಬರಬೇಕೆಂದು ಎಷ್ಟೋ ಕೆಲಸಗಳನ್ನು ಮಾಡಿದೆನು. ಇದನ್ನು ಇನ್ನೂ ಸುಖಪಡಿಸಬೇಕೆಂದು ಪುಣ್ಯ ಕರ್ಮಗಳನ್ನು ಕೂಡ ಮಾಡಿದೆನು. ಹಾಗೆ ಜೀವನವೆಲ್ಲ ಈ ದೇಹಕ್ಕಾಗಿಯೇ ಕಷ್ಟ ಪಟ್ಟೆನು. ಅಂದರೆ ಈ ದೇಹವನ್ನು ಸುಖ ಪಡಿಸುವುದಕ್ಕಾಗಿ ಮತ್ತೆ ಈ ದೇಹವನ್ನೇ ಕಷ್ಟಪಡಿಸಿದೆನು. ಇದು ಬಹಳ ವಿಚಿತ್ರ.

ಯಾವಾಗಲೋ ರಾತ್ರಿ ಸ್ವಲ್ಪ ಹೊತ್ತು ಎಸಿ ಹಾಕಿಕೊಂಡು ಮಲಗಿಕೊಳ್ಳುವುದಕ್ಕೆ ಆ ಸ್ವಲ್ಪ ಸುಖವನ್ನು ದೇಹಕ್ಕೆ ಕೊಡುವುದಕ್ಕಾಗಿ ಬೆಳಗ್ಗೆಯಿಂದ ಸಂಜೆಯವರೆಗೆ ದೇಹವನ್ನು ಕಷ್ಟಪಡಿಸಿದೆನು. ಇದು ಬಹಳ ವಿಚಿತ್ರ.

ಯಾರಾಗಲಿ ಅಷ್ಟೇ, ಸಂಪಾದಿಸುವವರು ಸಂಪಾದಿಸುತ್ತಿದ್ದಾರೆ. ವ್ಯಾಪಾರ ಮಾಡುವವರು ವ್ಯಾಪಾರವನ್ನು ಮಾಡುತ್ತಿದ್ದಾರೆ. ಉದ್ಯೋಗ ಮಾಡುವವರು ಉದ್ಯೋಗವನ್ನು ಮಾಡುತ್ತಿದ್ದಾರೆ. ಇನ್ನು ಹೆಣ್ಣು ಮಕ್ಕಳಾದರೆ ಮನೆಕೆಲಸವನ್ನು ಮಾಡುತ್ತಿದ್ದಾರೆ. ಉದ್ಯೋಗಗಳನ್ನು ಮಾಡುತ್ತಿದ್ದಾರೆ. ಇದೆಲ್ಲವನ್ನು ಏಕೆ ಮಾಡುತ್ತಿದ್ದಾರೆ? ಏಕೆ ಕಷ್ಟಪಡುತ್ತಿದ್ದಾರೆ ಎಂದರೆ ಈ ದೇಹವನ್ನು ಸುಖ ಪಡಿಸುವುದಕ್ಕಾಗಿಯೇ.

ಬಹಳಷ್ಟು ಜನ ಅಮೆರಿಕಾಗೆ ಹೋದರೆ ಸೌಕರ್ಯಗಳು ಹೆಚ್ಚಾಗಿ ಸಿಗುತ್ತವೆ. ಚೆನ್ನಾಗಿ ಸುಖಪಡಬಹುದು ಎಂದುಕೊಳ್ಳುತ್ತಾರೆ. ಪಾಪ! ಇಂಡಿಯಾದಲ್ಲಿದ್ದರೆ, ಕೆಲಸದವರು ಸಿಗುತ್ತಾರೆ. ಆ ಮನೆ ಕಸಗುಡಿಸುವುದು, ಮುಸುರೆ ತೊಳೆಯುವುದು ಕೆಲಸದವರು ಮಾಡಿಕೊಡುತ್ತಾರೆ. ಆದರೆ, ಅಮೆರಿಕಾದ ಹುಡುಗನೆಂದು ಅಷ್ಟು ಕೋಟಿಗಳು ವರದಕ್ಷಿಣೆಯನ್ನು ಕೊಟ್ಟು ಮದುವೆ ಮಾಡಿದರೆ ಅಲ್ಲಿಗೆ ಹೋಗಿ ಅವರು ಮಾಡುವ ಕೆಲಸವೇನೆಂದರೆ ಮನೆಕೆಲಸ! ಮನೆಯ ಕಸ ಬಳಿಯುವುದು, ಶೌಚಾಲಯವನ್ನು ತೊಳೆಯುವುದು, ಅಡುಗೆ ಮಾಡುವುದು, ಮಾರುಕಟ್ಟೆಗೆ ಹೋಗಿ ಎಲ್ಲ ಅವರೇ ತಂದುಕೊಳ್ಳುವುದು ಮಾಡುತ್ತಾರೆ. ಇದು ಏನುಸುಖವೋ ಅರ್ಥವಾಗದು.

ಅಮೇರಿಕಾ ಸಂಬಂಧವೆಂದು ಕುಪ್ಪಳಿಸುತ್ತಾರೆ. ಏನಾದರೇನು ಇಲ್ಲಿದ್ದರೂ ಕಷ್ಟಪಡುತ್ತಿದ್ದಾರೆ, ಅಲ್ಲಿಗೆ ಹೋದರೂ ಕಷ್ಟಪಡುತ್ತಿದ್ದಾರೆ. ಮತ್ತೆ ಹಾಗೆ ದೇಹವನ್ನು ಸುಖ ಪಡಿಸುವುದಕ್ಕಾಗಿ ಮತ್ತೆ ದೇಹವನ್ನು ಕಷ್ಟಪಡಿಸುತ್ತಿದ್ದಾರೆ. ಅದಕ್ಕೆ ವಶಿಷ್ಠರು ಹೇಳಿದ್ದಾರೆ ಸುಖವು ಉಗುರಿನಷ್ಟು ಕಷ್ಟಗಳು ಬೆಟ್ಟದಷ್ಟು ಎಂದು.

ಕಷ್ಟಗಳು ಎಂದರೆ ಯಾವುದೋ ರೋಗ ಬರುವುದರಿಂದ, ಸಮಸ್ಯೆಗಳು ಬರುವುದರಿಂದ ಪಡುವ ಕಷ್ಟಗಳಲ್ಲ. ದಿನಚರಿ, ದಿನನಿತ್ಯದ ಕೆಲಸಗಳನ್ನು ಮಾಡಿಕೊಂಡರೂ ಕೂಡ ಎಷ್ಟೋ ಕಷ್ಟ ಪಡಬೇಕಾಗುತ್ತದೆ. ಇನ್ನು ಮಕ್ಕಳಿದ್ದರೆ ಅವರ ಮೇಲೆ ಕೂಡ ದೃಷ್ಟಿ ಇಡಬೇಕಾಗುತ್ತದೆ. ಅವರನ್ನು ಪೋಷಿಸುವುದು, ಪ್ರಯೋಜಕರನ್ನಾಗಿ ಮಾಡುವುದು ಎಷ್ಟು ಕಷ್ಟ. ಅವರನ್ನು ಓದಿಸುವುದು, ಶಾಲೆಗೆ ಬಿಡುವುದು ಒಂದು ಯಂತ್ರದಂತೆ ಕೆಲಸ ಮಾಡಬೇಕು.

ಹೋಗಲಿ ಅಷ್ಟು ಕಷ್ಟಪಟ್ಟು, ಅಷ್ಟು ತಿಪ್ಪಲು ಬೀಳುತ್ತಾ, ಅಷ್ಟು ಸುಖವಾಗಿದ್ದ ದೇಹ ನೀನಾ ಅಂದರೆ! ಅಸಲು ಆ ದೇಹವು ನೀನು ಅಲ್ಲವೇ ಅಲ್ಲ. ಈ ದೇಹ ನಾನಲ್ಲ ಎಂದು ತಿಳಿದುಕೊಂಡ ಮೇಲೆ ನನ್ನಲ್ಲಿಯೇ ನಾನು ಪ್ರಶ್ನೆಗಳನ್ನು ಹಾಕಿಕೊಂಡೆನು.

ಮತ್ತೆ ನಾನು ದೇಹ ಅಲ್ಲದಾಗ ದೇಹಕ್ಕಾಗಿ ಇಲ್ಲಿಯವರೆಗೆ ನಾನು ಸಂಪಾದಿಸಿದವು ಏನಾದರೂ ಆತ್ಮನಾದ ನನಗೆ ಉಪಯೋಗವಾಗುತ್ತವೆಯೇ?

ಎಂದು ಪ್ರಶ್ನೆ ಹಾಕಿಕೊಂಡೆನು. ನೀವು ಕೂಡ ಈ ವಿಧವಾಗಿ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕು. ಪತ್ರೀಜಿಯವರೋ.. ನಾನೋ ಹೇಳಬೇಕಾಗಿಲ್ಲ. ನಿಮಗೆ ನೀವು ಅಂತರ್ ಮಥನವನ್ನು ಮಾಡಿಕೊಳ್ಳಬೇಕು. ಆಲೋಚಿಸಿದರೆ ಈ ಕೋಟಿಗಳಲ್ಲ ಒಂದು ಪೈಸೆಯೂ ಕೂಡ ಆತ್ಮನಾದ ನನಗೆ ಉಪಯೋಗವಾಗದು ಎಂಬುದು ಅರ್ಥವಾಯಿತು.

ಅಂದರೆ ಇಷ್ಟು ದಿನ ಕಷ್ಟಪಟ್ಟದ್ದೆಲ್ಲ ವ್ಯರ್ಥವೇ ಎಂದು ಅರ್ಥವಾಯಿತು. ದೇಹಕ್ಕಾಗಿಯೇ ಅಲ್ಲ, ಮಕ್ಕಳಿಗಾಗಿಯೂ ಕೂಡ ಕಷ್ಟಪಟ್ಟೆನು. ತೀರಾ ಜ್ಞಾನವನ್ನು ಹೊಂದಿದ ಮೇಲೆ ನಿನ್ನ ಜೀವನವನ್ನು ತ್ಯಾಗ ಮಾಡಿ ಮಕ್ಕಳಿಗಾಗಿ ಕಷ್ಟಪಟ್ಟೆಯೇ? ಹೋಗಲಿ ಆ ಮಕ್ಕಳು ನಿಜವಾಗಿಯೂ ನಿನ್ನ ಮಕ್ಕಳೇನಾ? ಅಂದರೆ ಅವರು ಕೂಡ ನಿನ್ನಂತೆ ಭೂಮಿಯ ಮೇಲೆ ಬಂದಿರುವಂತಹ ಆತ್ಮಗಳೇ. ಅವರೂ ಯಾವುದೋ ಲೋಕದಿಂದ ಬಂದಿದ್ದಾರೆ. ನಾನು ಯಾವುದೋ ಲೋಕದಿಂದ ಬಂದಿದ್ದೇನೆ. ನಂತರ ಮತ್ತೆ ಅವರು ಯಾವುದೋ ಲೋಕಕ್ಕೆ ಹೋಗುತ್ತಾರೆ ನಾನು ಕೂಡ ಯಾವುದೋ ಲೋಕಕ್ಕೆ ಹೋಗುತ್ತೇನೆ.

ಈ ಶರೀರವನ್ನು ಬಿಟ್ಟ ನಂತರ ಅವರಿಗೆ ನನಗೆ ಸಂಬಂಧವಿರದು. ಇದು ಅರ್ಥವಾದ ನಂತರ ಕೂಡಿರುವ ಕುಟುಂಬದಲ್ಲಿರುವ ನಮ್ಮ ಮಕ್ಕಳನ್ನು ಬೇರೆ ಕಳುಹಿಸಿದೆನು. ನನ್ನ ಮಕ್ಕಳಾಗಿ ಹುಟ್ಟಿ ನನಗಿರುವ ಆಸ್ತಿಯಲ್ಲಿ ಹಕ್ಕನ್ನು ಸಂಪಾದಿಸಿದ್ದಾರೆ. ಆದ್ದರಿಂದ ಅದು ಅವರಿಗೆ ಸೇರುತ್ತದೆಯಾದ್ದರಿಂದ ಅವರ ಭಾಗವನ್ನು ಅವರಿಗೆ ಕೊಟ್ಟು ನನ್ನ ನಂತರ ಹಕ್ಕು ಕೂಡ ಅವರದೇ ಆದ್ದರಿಂದ ನನ್ನ ನಂತರ ಅವರಿಗೆ ಸೇರುವಂತೆ ಬರೆದು ಹೊರಗೆ ಕಳುಹಿಸಿಬಿಟ್ಟೆನು. ಹಾಗೆ ದೇಹಬಂಧಗಳನ್ನು ಬಿಡಿಸಿಕೊಂಡೆನು.

ಕನಿಷ್ಠ ಈಗಿನಿಂದಾದರೂ ನನ್ನ ಕುರಿತು ಅಂದರೆ ಆತ್ಮನ ಕುರಿತು ಕಷ್ಟ ಪಡಬೇಕು. ಆತ್ಮಕ್ಕೆ ಲಾಭವನ್ನುಂಟು ಮಾಡುವ ಕೆಲಸಗಳನ್ನು ಮಾಡಬೇಕು. ಆತ್ಮೋನ್ನತಿಗೆ ಶ್ರಮ ಪಡಬೇಕು ಎಂದು ನಿರ್ಣಯಿಸಿಕೊಂಡು, ವ್ಯಾಪಾರವನ್ನು ಬಿಟ್ಟು ನನಗೇನೋ ಪದವಿಗಳಿದ್ದರೆ ಅವುಗಳನ್ನು ಕೂಡ ಬಿಟ್ಟು ಪೂರ್ತಿಯಾಗಿ ಆತ್ಮಕ್ಕೆ ಲಾಭವನ್ನುಂಟು ಮಾಡುವ ಕೆಲಸಗಳ ಮೇಲೆ ದೃಷ್ಟಿ ಇಟ್ಟೆನು.

ಮತ್ತೆ ಆತ್ಮನಾದ ನಾನು ಲಾಭವನ್ನು ಹೊಂದಬೇಕೆಂದರೆ ಏನು ಮಾಡಬೇಕು? ಎಂದಾಗ ಪತ್ರೀಜಿಯವರು ಸ್ಪಷ್ಟವಾಗಿ "ನೀನು ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು. ನಿನಗೆ ಲಾಭಿಸುವುದು ಜ್ಞಾನವೇ" ಎಂದು ಹೇಳಿದರು. ನೀನು ಶರೀರವನ್ನು ಬಿಟ್ಟ ನಂತರ ನಿನ್ನ ಶರೀರವನ್ನು ನಿನ್ನ ಕುಟುಂಬದ ಸದಸ್ಯರೇ ಬೂದಿ ಮಾಡುತ್ತಾರೆ.

ನಂತರ ಇರುವುದೇ ಆತ್ಮ.

ಎಲ್ಲರೂ ಭೂಮಿಯ ಮೇಲೆ ಅರಮನೆಯಂತಹ ಮನೆಗೆ ಹೋಗಬೇಕೆಂದು ಹೇಗೆ ಅಂದುಕೊಳ್ಳುತ್ತಾರೋ, ಮೇಲೆ ಹೋದಂತಹ ಆತ್ಮಗಳು ಯಾರಾದರೂ ಸರಿ ಉನ್ನತವಾದಂತಹ ಲೋಕಗಳನ್ನು ಸೇರಿಕೊಳ್ಳಬೇಕೆಂಬ ಹಂಬಲ ಪಡುತ್ತವೆ. ಅಂತಹ ಲೋಕಗಳು ಪ್ರಾಪ್ತಿಯಾಗಬೇಕೆಂದರೆ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು ಎಂಬುದು ಅರ್ಥವಾಯಿತು. ಭೂಮಿಯ ಮೇಲೆ ಹಣವನ್ನು ಸಂಪಾದಿಸಿದರೆ ಎಷ್ಟು ದೊಡ್ಡವನೋ.. ಶರೀರವಿರುವಾಗಲೇ ಜ್ಞಾನವನ್ನು ಸಂಪಾದಿಸಿಕೊಂಡವನು ಮೇಲಿನ ಲೋಕಗಳಲ್ಲಿ ಅಷ್ಟು ಶ್ರೇಷ್ಠವಾದವನು ಎಂದು ಅರ್ಥ ಮಾಡಿಕೊಂಡೆನು. ಈಗ ಹಗಲು– ರಾತ್ರಿ ಈ ಜ್ಞಾನ ಸಂಪಾದನೆಗೆ ಜೀವನವನ್ನು ವಿನಿಯೋಗಿಸುತ್ತಿದ್ದೇನೆ.

ಪತ್ರೀಜಿಯವರನ್ನು ಆದರ್ಶವಾಗಿ ತೆಗೆದುಕೊಂಡೆನು. ಆತನು ಸಮಯ ಸಿಕ್ಕರೆ ಯಾವುದೋ ಒಂದು ಕೆಲಸವನ್ನು ಮಾಡುತ್ತಿದ್ದರು. ಕ್ಲಾಸ್‌ಗಳಿಗೆ ಹೋಗುತ್ತಿದ್ದರು, ಯಾರು ಯಾರು ಯಾವ ಕೆಲಸಗಳನ್ನು ಮಾಡಬೇಕು ಎಂಬುದನ್ನು ಮಾಡಲು ಹೇಳುತ್ತಿದ್ದರು. ಸಮಯ ಸಿಕ್ಕರೆ ಧ್ಯಾನ ಜಗತ್ತು, ಸ್ಪಿರಿಚುವಲ್ ಇಂಡಿಯಾ ಪುಸ್ತಕಗಳನ್ನು ತಿದ್ದುತ್ತಿದ್ದರು. ಪುಸ್ತಕಗಳನ್ನು ಬರೆಯುತ್ತಿದ್ದರು ಬಹಳ ಪರಿಕಲ್ಪನೆ (ವಿಷಯ)ಗಳನ್ನು ರೆಕಾರ್ಡಿಂಗ್ ಮಾಡಿ ವಿಡಿಯೋಗಳಾಗಿ ರಿಲೀಸ್ ಮಾಡಿ ನಮ್ಮೆಲ್ಲರಿಗೂ ಒದಗಿಸುತ್ತಿದ್ದರು. ಆ ಪುಸ್ತಕಗಳಿಂದ, ಅವುಗಳನ್ನು ಕೇಳುವುದರಿಂದಲೇ ಅಲ್ಲವೇ ಈ ಸ್ಥಾಯಿಗೆ ಬಂದೆವು. ಅದಕ್ಕೆ ಅದೇ ಕೆಲಸ ನಾನು ಕೂಡ ಮಾಡುತ್ತಿದ್ದೇನೆ.

ಝೂಮ್ ಸೆಷನ್‌ಗಳ ಮೂಲಕ ಸಂದೇಶಗಳನ್ನು ಕೊಡುತ್ತಿದ್ದೇನೆ. ಹೊರಗಡೆ ಹೋಗಿ ಕ್ಲಾಸ್‌ಗಳನ್ನು ಹೇಳುತ್ತಿದ್ದೇನೆ. ಸಮಯ ಸಿಕ್ಕಾಗಲೆಲ್ಲಾ ಪುಸ್ತಕಗಳನ್ನು ತಿದ್ದುತ್ತೇನೆ. ಇದನ್ನೆಲ್ಲ ಏಕೆ ಮಾಡುತ್ತಿದ್ದೇನೆ ಎಂದರೆ ಆತ್ಮನಾದ ನಾನು ನನ್ನ ಸಮಯವನ್ನು ವ್ಯರ್ಥ ಮಾಡದಂತೆ ಆತ್ಮ ಲಾಭಕ್ಕಾಗಿ ಏನೋ ಒಂದು ಕೆಲಸವನ್ನು ಮಾಡಬೇಕೆಂಬುದೇ ನನ್ನ ಉದ್ದೇಶ, ಆಶಯವಾಗಿದೆ.

ಅದಕ್ಕೆ ಆಲೋಚಿಸಿರಿ, ನಿಮಗೆ ಸಿಕ್ಕಿರುವ ಈ ಅವಕಾಶವನ್ನು ವ್ಯರ್ಥ ಮಾಡಬೇಡಿರಿ. ಏಕೆ ವ್ಯರ್ಥವಾದ ಸಂಭಾಷಣೆಗಳಿಗೆ ಸಮಯವನ್ನು ವ್ಯರ್ಥ ಮಾಡುತ್ತೀರಿ? ಟಿವಿಗಳನ್ನು ನೋಡುವುದು, ಫೋನ್‌ನಲ್ಲಿ ಕಾಲಾಕ್ಷೇಪಕ್ಕೆ ಯೂಟ್ಯೂಬ್ ನೋಡುವುದು ಹೀಗೆ ಮಾಡುವುದರಿಂದ ಕೊಡಲ್ಪಟ್ಟ ಸಮಯವೆಲ್ಲ ವ್ಯರ್ಥ ಮಾಡಿಕೊಂಡಂತೆಯೇ ಅಲ್ಲವೇ?.

ಅದಕ್ಕೆ ಬದಲಾಗಿ ಆತ್ಮಕ್ಕೆ ಲಾಭವನ್ನುಂಟು ಮಾಡುವ ಕೆಲಸಗಳನ್ನು ಮಾಡಿದರೆ,

ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಕೆಲಸಗಳನ್ನು ಮಾಡಿದರೆ ಜ್ಞಾನವು ವೃದ್ಧಿಯಾಗುತ್ತದೆ. ಈಗ ನೀವು ಯಾವ ಮೋಜುಗಳನ್ನು ತೀರಿಸಿಕೊಳ್ಳುತ್ತಿದ್ದೀರೋ? ಯಾವ ಕೋರಿಕೆಗಳನ್ನು ತೀರಿಸಿಕೊಳ್ಳುತ್ತಿದ್ದೀರೋ? ಅವೆಲ್ಲವನ್ನು ಇದಕ್ಕೂ ಮೊದಲು ಇರುವ ಜನ್ಮಗಳಲ್ಲಿಯೂ ಕೂಡ ಅನುಭವಿಸಿದ್ದೀರಿ. ಹಿಂದಿನ ಜನ್ಮಗಳಲ್ಲಿ ಎಲ್ಲ ಇವೆ ಗಂಡನಿದ್ದಾನೆ, ಹೆಂಡತಿ ಇದ್ದಾಳೆ, ಮಕ್ಕಳಿದ್ದಾರೆ, ಸಂಸಾರವಿದೆ, ಸಂಪಾದನೆ ಇದೆ, ಸುಖಗಳಿವೆ, ಒಂದೊಂದು ಜನ್ಮದಲ್ಲಿ ಕಷ್ಟಗಳೂ ಇವೆ. ಒಂದೊಂದು ಜನ್ಮಗಳಲ್ಲಿ ಭೋಗಗಳಿವೆ. ಇವೆಲ್ಲವನ್ನು ಅನುಭವಿಸಿದ್ದೀರಿ. ಇಷ್ಟು ಜನ್ಮಗಳನ್ನು ಅನುಭವಿಸಿದರೂ ಇನ್ನೂ ನಿಮಗೆ ತೃಪ್ತಿ ತೀರಲಿಲ್ಲವೇ?

ಒಂದು ಬಾರಿ ಆಲೋಚಿಸಿರಿ! ನಾನು ಖಚಿತವಾಗಿ ಹೇಳುತ್ತಿದ್ದೇನೆ. ಝೂಮ್‌ನೊಳಗೆ ಬಂದ ನೀವೆಲ್ಲ 350 ರಿಂದ 360 ಜನ್ಮಗಳನ್ನು ದಾಟಿದವರೇ. ಇನ್ನೂ ನಿಮ್ಮಲ್ಲಿ ಕೆಲವರು ಅದಕ್ಕಿಂತಲೂ ಹೆಚ್ಚಾಗಿಯೇ ಇರುತ್ತೀರಿ. ಇನ್ನು ಏಕೆ ಈ ಮಮಕಾರಗಳು? ಅಂದರೆ ಎಲ್ಲರನ್ನೂ ಬಿಟ್ಟುಬಿಡಿ ಎನ್ನುವಿರಾ? ಎಲ್ಲವನ್ನೂ ಬಿಡಿ ಎನ್ನುವಿರಾ? ಯಾವ ಜವಾಬ್ದಾರಿಗಳನ್ನೂ ನೋಡಿಕೊಳ್ಳಬೇಡಿ ಎನ್ನುವಿರಾ? ಎಂದು ನೀವು ಕೇಳಬಹುದು.

ಎಲ್ಲವನ್ನೂ ನೋಡಿಕೊಳ್ಳಿ ನಾನು ಬೇಡ ಎನ್ನುವುದಿಲ್ಲ. ಆದರೆ, ಇರುವ, ಸ್ವಲ್ಪ ಉಳಿದ ಸಮಯವನ್ನು ನಿಮಗೆ ಅಂದರೆ ಆತ್ಮಕ್ಕೆ ಒದಗಿಸಿರಿ. ಆತ್ಮದ ಲಾಭಕ್ಕಾಗಿ ಕಷ್ಟಪಡಿರಿ. ಕೃಷಿ ಮಾಡಿರಿ ಖಾಲಿ ಸಮಯವನ್ನು ವ್ಯರ್ಥ ಮಾಡಿಕೊಳ್ಳದೇ ಆ ಸಮಯವನ್ನು ಸದುಪಯೋಗ ಮಾಡಿಕೊಳ್ಳಿರಿ. ನಾನು ಯಾವುದನ್ನು ಆಚರಿಸುತ್ತಿದ್ದೇನೋ ಅದನ್ನೇ ನಿಮಗೆ ಕಲಿಸುತ್ತಿದ್ದೇನೆ. 23 ಸಂವತ್ಸರಗಳಿಂದ ನಾನು ಎಲ್ಲಿಯವರೆಗೆ ಮಾಡಬಲ್ಲೆನೋ, ಎಷ್ಟು ಮಾಡಬಲ್ಲೆನೋ, ಎಷ್ಟು ರೀತಿಗಳಲ್ಲಿ ಮಾಡಬಲ್ಲೆನೋ ಎಲ್ಲವನ್ನು ಮಾಡುತ್ತಲೇ ಇದ್ದೇನೆ. ನನ್ನೊಂದಿಗೆ ನೀವು ಎಲ್ಲರೂ ಆತ್ಮಗಳೇ ಆದ್ದರಿಂದ ನೀವು ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು.

ಆದ್ದರಿಂದ ಮೇಲೆ ಹೋದ ನಂತರ ನೀವು ಲಾಭವನ್ನು ಹೊಂದಬೇಕು. ಉನ್ನತ ಲೋಕಗಳನ್ನು ಸೇರಿಕೊಳ್ಳಬೇಕು. ಹೀಗಾಗಿ ನಿಮ್ಮನ್ನು ಪ್ರೋತ್ಸಾಹಿಸುತ್ತಿದ್ದೇನೆ. ನಿಮ್ಮ ಆತ್ಮದ ಜವಾಬ್ದಾರಿಯನ್ನು ನೆನಪು ಮಾಡುತ್ತಿದ್ದೇನೆ.

ಇಲ್ಲಿ ಎರಡು ಜವಾಬ್ದಾರಿಗಳು ಇವೇರಿ!. ದೇಹದ ಜವಾಬ್ದಾರಿ, ಆತ್ಮದ ಜವಾಬ್ದಾರಿ. ಪತ್ರೀಜಿಯವರು 'ಎರಡನ್ನೂ ಸಮತೋಲನ ಮಾಡಿ' ಎಂದಿದ್ದಾರೆ. ದೇಹದ ಜವಾಬ್ದಾರಿ ಎಂದರೆ ಸಂಸಾರವನ್ನು ನೋಡಿಕೊಳ್ಳಬೇಕು. ಮಕ್ಕಳನ್ನು ನೋಡಿಕೊಳ್ಳಬೇಕು. ಸಂಪಾದಿಸಿಕೊಳ್ಳಬೇಕು. ಸ್ತ್ರೀ ಗಂಡನನ್ನು ನೋಡಿಕೊಳ್ಳಬೇಕು.

ಪುರುಷ ಹೆಂಡತಿಯನ್ನು ನೋಡಿಕೊಳ್ಳಬೇಕು. ತಂದೆ–ತಾಯಿಯರನ್ನು ನೋಡಿಕೊಳ್ಳಬೇಕು ಇವೆಲ್ಲವೂ ದೇಹದ ಕರ್ತವ್ಯಗಳು.

ಆತ್ಮದ ಜವಾಬ್ದಾರಿ ಅಂದರೆ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು. ಜ್ಞಾನ ಎಂದರೆ ನಮಗೆ ನಮ್ಮ ಕಣ್ಣಿಗೆ ಕಾಣಿಸದೆ ಇರುವಂಥವುಗಳ ಕುರಿತು ತಿಳಿದುಕೊಳ್ಳುವುದು. ಅವುಗಳ ಕುರಿತು ನೀವು ಎಷ್ಟು ತಿಳಿದುಕೊಂಡರೆ, ನೀವು ಅಷ್ಟು ಜ್ಞಾನವಂತರು. ಅದಕ್ಕೆ ಪತ್ರೀಜಿಯವರು ಮರಣಿಸಿದ ನಂತರ ನಡೆಯುವುದು ಯಾರಿಗೂ ತಿಳಿಯದು. ಆದ ಕಾರಣ, ಅದರ ಕುರಿತು ತಿಳಿದುಕೊಳ್ಳಿ ಎನ್ನುತ್ತಾರೆ. ಅದಕ್ಕಾಗಿ ನಾನೀಗ ಇದರ ಮೇಲೆ ಹೆಚ್ಚು ದೃಷ್ಟಿ ಇಡುತ್ತೇನೆ. ಮರಣಿಸಿದ ನಂತರ ಆತ್ಮನನ್ನು ಉನ್ನತ ಲೋಕಗಳಿಗೆ ಸೇರಿಸುವುದಾದರೆ ಭೂಮಿಯ ಮೇಲೆ ನಿಮ್ಮ ಜವಾಬ್ದಾರಿಯನ್ನು ನೆರವೇರಿಸಿದಂತೆಯೇ. ಅದೇ ಆತ್ಮದ ಜವಾಬ್ದಾರಿಯಾಗಿದೆ.

ಧನವನ್ನು ಎಷ್ಟು ಸಂಪಾದಿಸಿದರೂ ನಿಮಗೆ ತೃಪ್ತಿಯಾಗದು. ಹಾಗೆಯೇ ಆತ್ಮರಾದ ನೀವು ಜ್ಞಾನ ಸಂಪಾದನೆಗೆ ತೃಪ್ತಿ ಇಲ್ಲದೆ ಕಷ್ಟ ಪಡಬೇಕು. ನಾನು ಎಷ್ಟೋ ರಾಜ್ಯಗಳನ್ನು ತಿರುಗುತ್ತಿದ್ದೇನೆ ಜ್ಞಾನಾಕಾಂಕ್ಷೆ ಇರುವವರು ಎಲ್ಲ ಕಡೆಯಲ್ಲೂ ಇದ್ದಾರೆ. ಇಲ್ಲದೆ ಏನೂ ಇಲ್ಲ.

ಎಲ್ಲರಿಗೂ ಅಲ್ಲದೆ ಹೋದರೂ ಅವರಿಗೆ ಈ ಜ್ಞಾನವನ್ನು ನಾವು ಒದಗಿಸುವುದಾದರೆ ಇನ್ನು ಇದಕ್ಕಿಂತ ಬೇಕಾಗಿರುವುದು ಏನೂ ಇಲ್ಲ. ಅದಕ್ಕೆ ತಿರುಗುತ್ತಿದ್ದೇನೆ. ಪತ್ರೀಜಿಯವರಿಗೆ ನನ್ನ ವಯಸ್ಸು ಬಂದಾಗ ಯಾವಾಗಲೂ ಜೊತೆಯಾಗಿ ಇಬ್ಬರು ಇರುತ್ತಿದ್ದರು. ಯಾರೂ ಇಲ್ಲದೆ ಅವರು ಹೋಗುತ್ತಿರಲಿಲ್ಲ.

ಮೊನ್ನೆ ನಾನು ಧಾರವಾಡಕ್ಕೆ ಹೋದಾಗ ಸಾಯಿಲೀಲಾ ಅವರು 'ಏನ್ರೀ ಸರ್ ನೀವು ಲೆಕ್ಕವಿಲ್ಲದಂತೆ ತಿರುಗುತ್ತಿದ್ದೀರಿ, ನೀವು ತೂಗಾಡುತ್ತಿದ್ದೀರಿ, ನಿಮಗೆ ತಿಳಿಯುತ್ತಿಲ್ಲವೇನೋ..! ಆದರೆ, ನಮಗೆ ತಿಳಿಯುತ್ತಿದೆ. ನೀವು ಕೂಡ ಯಾರನ್ನಾದರೂ ಕರೆದುಕೊಂಡು ಹೋಗಿರಿ ಎಂದರೆ ಬೇಡ ಎನ್ನುತ್ತೀರಿ' ಎಂದು ಸಾಯಿಲೀಲಾ ಹೇಳಿದರು. ಏನಾದರೂ ಆಗಲಿ ಭೂಮಿಯ ಮೇಲೆ ಇರುವಷ್ಟು ಕಾಲವೂ 10 ಜನರಿಗೆ ಜ್ಞಾನವನ್ನು ಕೊಡಬೇಕು. ಅದೇ ನನ್ನ ಆಶಯ.

ಪತ್ರೀಜಿಯವರು ಮರಣಿಸುತ್ತೇನೆ ಎಂದು ತಿಳಿದರೂ ಕೂಡ ಲಡಾಕ್‌ಗೆ ಹೋದರು. ಕಡ್ತಾಲ್‌ನಲ್ಲಿ ನಮ್ಮ ಟ್ರಸ್ಟಿಗಳೆಲ್ಲರೂ ಬೇಡವೆಂದರು. ಆದರೂ ಸರಿ ಆತನು ಲೆಕ್ಕಿಸಲಿಲ್ಲ. ಅವರು ವಿಮಾನ ರದ್ದಾದರೆ ಹಿಂದಕ್ಕೆ ಬಂದುಬಿಡಬಹುದು. ಇಲ್ಲವೆಂದರೆ ನಿಂತು ಬಿಡಬಹುದು ಎಂದುಕೊಂಡರೆ, 'ನನಗೆ ಹೆಲಿಕಾಪ್ಟರ್ ಬೇಕು, ನಾನು ಅದರಲ್ಲಿ ಹೋಗುತ್ತೇನೆ' ಎಂದರು. ಎಷ್ಟು ಛಲವೋ ನೋಡಿರಿ. ಟಿಕೆಟ್

ದೊರಕುತ್ತದೆ ಅಂದುಕೊಂಡಿರಲಿಲ್ಲ. ಆದರೂ ಯಾವುದೋ ವಿಮಾನದಲ್ಲಿ ಎರಡು ಟಿಕೆಟ್‌ಗಳು ದೊರಕಿದವು. ಹೋದಮೇಲೆ ಸುಸ್ತಾಗಿದ್ದರಿಂದ ದೆಹಲಿಯಲ್ಲಿ ಒಂದೆರಡು ದಿನಗಳೋ ಮೂರು ದಿನಗಳೋ ಅಲ್ಲಿಯೇ ವಿಶ್ರಾಂತಿ ಪಡೆದು ನಂತರ ಬಂದರು. ಬಂದ ನಂತರ ಅವರು ಬಹಳ ದಿನಗಳು ಉಳಿಯಲಿಲ್ಲ.

ಮತ್ತೆ ಅವರು ಅಂತಹ ಸ್ಥಿತಿಯಲ್ಲಿ ಕೂಡ ವಿಶ್ರಾಂತಿ ಇಲ್ಲದೆ, ವಿಶ್ರಾಂತಿ ತೆಗೆದುಕೊಳ್ಳದೆ ಎಷ್ಟು ಕಷ್ಟಪಟ್ಟರು. ನಾವು ಮಲಗಿಕೊಂಡರೆ ಹೇಗೆ..?. ಅದಕ್ಕೆ ನಾನು ಮಾಡುತ್ತಿದ್ದೇನೆ. ನೀವು ಅಷ್ಟೊಂದು ಕಷ್ಟಪಡಿ ಎನ್ನುವುದಿಲ್ಲ ನಾನು. ಪತ್ರೀಜಿಯವರು ಹೇಳಿದಂತೆ ಶೇ. 50ರಷ್ಟು ದೇಹಕ್ಕೆ, ಶೇ. 50ರಷ್ಟು ಆತ್ಮಕ್ಕೆ ಬಳಸಿಕೊಳ್ಳಿ ಎಂದು ಕೂಡ ಹೇಳುವುದಿಲ್ಲ. ಕನಿಷ್ಠ ಶೇ. 75 ದೇಹಕ್ಕೆ ನೋಡಿಕೊಳ್ಳಿ ಶೇ.25 ಆತ್ಮಕ್ಕೆ ಒದಗಿಸಿ ಎಂದು ಹೇಳುತ್ತಿದ್ದೇನೆ. ನಾನು ಹೇಳುವ ಮಾತುಗಳು ನಿಮಗೆ ಮೇಲೆ ಹೋದಾಗ ಅರ್ಥವಾಗುತ್ತವೆ.

ಆದ್ದರಿಂದ ಹಗಲು ಜೀವನವೆಂದರೆ ಜ್ಞಾನವನ್ನು ಪೂರ್ತಿಯಾಗಿ ಹೊಂದಿದವರ ಜೀವನ. ಆ ಜ್ಞಾನವನ್ನು ಹೊಂದಿದವನ ವರ್ತನೆ ಹೇಗಿರುತ್ತದೆ? ಹಾಗೆಯೇ ಜ್ಞಾನವನ್ನು ಹೊಂದದೆ ಅಜ್ಞಾನದಲ್ಲಿ ಇರುತ್ತಾ, ರಾತ್ರಿ ಜೀವನದಲ್ಲಿ ಇರುವವನ ವರ್ತನೆ ಹೇಗಿರುತ್ತದೆ? ಎಂದು ಸ್ವಲ್ಪ ತಿಳಿಯೋಣ.

1) ಸಹಜವಾಗಿ ಜ್ಞಾನಿ ಪ್ರಾಪಂಚಿಕ ವಿಷಯಗಳ ಬಗ್ಗೆ ವಿರಕ್ತಿ ಹೊಂದಿರುತ್ತಾನೆ. ಆತ್ಮದ ವಿಷಯಗಳ ಬಗ್ಗೆ ಆಸಕ್ತಿಯನ್ನು ಹೊಂದಿರುತ್ತಾನೆ. ಆದರೆ ಅಜ್ಞಾನಿ ಪ್ರಾಪಂಚಿಕ ವಿಷಯಗಳ ಬಗ್ಗೆ ಆಸಕ್ತಿಯನ್ನು ಹೊಂದಿರುತ್ತಾನೆ. ಆತ್ಮ ವಿಷಯಗಳ ಬಗ್ಗೆ ವಿರಕ್ತಿ ಪ್ರದರ್ಶಿಸುತ್ತಾ ಇರುತ್ತಾನೆ. ಜ್ಞಾನಿ ಆಧ್ಯಾತ್ಮಿಕದಲ್ಲಿರುತ್ತಾನೆ. ಅಂತಹ ಜ್ಞಾನಿಯನ್ನು ಜ್ಞಾನದಿಂದ ಆಕರ್ಷಿಸಬೇಕು. ಆದರೆ, ಅಜ್ಞಾನಿ ಪ್ರಾಪಂಚಿಕದಲ್ಲಿರುತ್ತಾನೆ. ಅಂತಹ ಅಜ್ಞಾನಿಯನ್ನು ಹಣದಿಂದ ಆಕರ್ಷಿಸಬೇಕು.

2) ಜ್ಞಾನಿ ದುಃಖದಲ್ಲಿಯೂ ಕೂಡ ಆನಂದದಿಂದ ಜೀವಿಸುತ್ತಾನೆ. ಆದರೆ, ಅಜ್ಞಾನಿ ಆನಂದದಿಂದ ಇರಬೇಕಾದ ಸಂದರ್ಭಗಳಲ್ಲಿ ಕೂಡ ದುಃಖಿಸುತ್ತಾನೆ.

3) ಜ್ಞಾನಿ ಕೋರಿಕೆಗಳನ್ನು ಹಿಡಿತದಲ್ಲಿಟ್ಟುಕೊಳ್ಳುತ್ತಾನೆ. ಆದರೆ, ಅಜ್ಞಾನಿ ಕೋರಿಕೆಗಳಿಗೆ ದಾಸನಾಗುತ್ತಾನೆ.

4) ಜ್ಞಾನಿ ಆಸೆ ಪಡುವುದಿಲ್ಲ.

5) ಜ್ಞಾನಿ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾನೆ. ಆ ಜ್ಞಾನವೇ ಆತನನ್ನು ರಕ್ಷಿಸುತ್ತದೆ. ಆದರೆ, ಅಜ್ಞಾನಿ ಧನವನ್ನು ಬೆಳೆಸಿಕೊಳ್ಳುತ್ತಾನೆ. ಆ ಧನವನ್ನು ಅಜ್ಞಾನಿಯೇ ರಕ್ಷಿಸಿಕೊಳ್ಳಬೇಕು.

6) ಜ್ಞಾನಿ ಇರುವುದರಲ್ಲಿಯೇ ತೃಪ್ತಿಯಾಗಿ ಜೀವಿಸುತ್ತಾನೆ. ಆದರೆ, ಅಜ್ಞಾನಿಗೆ ಎಲ್ಲ

ಇದ್ದರೂ ತೃಪ್ತಿ ಇರದು.

7) ಜ್ಞಾನಿ ಇರುವುದರಲ್ಲಿಯೇ ಹಂಚುತ್ತಾನೆ. ಆದರೆ, ಅಜ್ಞಾನಿ ಏನನ್ನೂ ಹಂಚಲಾರನು.

8) ಜ್ಞಾನಿ ಕೊಡಲಾರದೆ ಇರಲಾರನು. ಅಜ್ಞಾನಿ ಕೊಡಲಾರನು.

9) ಆತ್ಮಜ್ಞಾನಿಗೆ ಎಲ್ಲ ಒಂದೇ. ಆದರೆ ಅಜ್ಞಾನಿ ಎಲ್ಲ ಬೇರೆ ಬೇರೆ ಎಂದುಕೊಳ್ಳುತ್ತಾನೆ.


10) ಜ್ಞಾನಿ ಎಲ್ಲರನ್ನೂ ಪ್ರೀತಿಸುತ್ತಾನೆ. ತನ್ನವರೊಂದಿಗೆ ಸಹ ಎಲ್ಲರನ್ನೂ ಸಮಾನವಾಗಿ ಭಾವಿಸುತ್ತಾನೆ. ಆದರೆ, ಅಜ್ಞಾನಿ ಎಲ್ಲರನ್ನೂ ದ್ವೇಷಿಸುತ್ತಾನೆ. ತನ್ನವರನ್ನು ಪ್ರತ್ಯೇಕವಾಗಿ ನೋಡುತ್ತಾನೆ. ಅಂದರೆ ರಾಗ ದ್ವೇಷಗಳನ್ನು ಪ್ರದರ್ಶಿಸುತ್ತಾನೆ.

11) ಜ್ಞಾನಿ ಇತರರಿಗಾಗಿ ಸ್ವಲ್ಪ ಆಲೋಚಿಸುತ್ತಾನೆ. ಆದರೆ, ಅಜ್ಞಾನಿ ತನಗಾಗಿ ಮಾತ್ರವೇ ಆಲೋಚಿಸುತ್ತಾನೆ.

12) ಜ್ಞಾನಿ ಇತರರ ಆನಂದಕ್ಕಾಗಿ ಶ್ರಮಿಸುತ್ತಾನೆ. ಆದರೆ, ಅಜ್ಞಾನಿ ತನ್ನ ಆನಂದಕ್ಕಾಗಿ ಮಾತ್ರವೇ ನೋಡಿಕೊಳ್ಳುತ್ತಾನೆ.

13) ಜ್ಞಾನಿ ಲೋಕ ಕಲ್ಯಾಣಕರವಾದ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಾನೆ. ಅವುಗಳನ್ನು ಪ್ರೋತ್ಸಾಹಿಸುತ್ತಾನೆ. ಅವುಗಳಿಗೆ ಸಹಕರಿಸುತ್ತಾನೆ. ಆದರೆ, ಅಜ್ಞಾನಿ ಪ್ರೋತ್ಸಾಹಿಸುವುದಿಲ್ಲ ಸಹಕರಿಸುವುದಿಲ್ಲ. ಯಾವುದು ಏನಾದರೂ ನೆನಪಿಟ್ಟುಕೊಳ್ಳಿ. ಯಾರಾಗಲಿ ಹಗಲಿನ ಜೀವನವನ್ನೇ ಜೀವಿಸಬೇಕು.

---




**"ಹೊಟ್ಟೆಗೆ ವಿಶ್ರಾಂತಿಯನ್ನು ಕೊಟ್ಟರೆ "ಉಪವಾಸ" ಎನ್ನುತ್ತಾರೆ. ಬಾಯಿಗೆ ವಿಶ್ರಾಂತಿಯನ್ನು ಕೊಟ್ಟರೆ ಮೌನವೆನ್ನುತ್ತಾರೆ. ಹಾಗೆಯೇ ಮನಸ್ಸಿಗೆ ವಿಶ್ರಾಂತಿಯನ್ನು ಕೊಟ್ಟರೆ ಧ್ಯಾನವನ್ನುತ್ತಾರೆ."**

**– ಬ್ರಹ್ಮರ್ಷಿ ಪಿತಾಮಹ ಡಾ. ಸುಭಾಷ್ ಪತ್ರೀಜಿ**

**"ಧ್ಯಾನವೆಂದರೆ ಮನಸ್ಸನ್ನು ಶಾಂತ ಪಡಿಸಿಕೊಳ್ಳುವುದು, ಮನಸ್ಸನ್ನು ನಿಯಂತ್ರಿಸಿಕೊಳ್ಳುವುದು. ಇನ್ನೂ ಹೇಳಬೇಕೆಂದರೆ ಶರೀರಕ್ಕೆ, ಇಂದ್ರಿಯಗಳಿಗೆ, ಮನಸಿಗೆ ಸಂಪೂರ್ಣವಾಗಿ ವಿಶ್ರಾಂತಿಯನ್ನು ಕೊಡುವುದೇ ಧ್ಯಾನ."**

**– ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್**





**"ಕೋಟಿಗಳಿದ್ದರೂ ಕೂಡ ಭೋಗಿಯು ಒಂದು ಕ್ಷಣದ ಆಯಸ್ಸನ್ನು ಕೊಳ್ಳಲಾರನು. ಆದರೆ ಕೋಟಿಗಳಿಲ್ಲದಿದ್ದರೂ ಯೋಗಿಯು ಆಯಸ್ಸನ್ನು ಹೆಚ್ಚು ಮಾಡಿಕೊಳ್ಳಬಲ್ಲನು."**

**–ಬ್ರಹ್ಮವಿದ್ವರಿಷ್ಟ ರಾಜಲಕ್ಷ್ಮಿ ಅಮ್ಮನವರು**

# ಏಳು ಶರೀರಗಳು

ಅಜ್ಞಾನ ಸ್ಥಿತಿಯಲ್ಲಿರುವ ಮಾನವರಿಗೆ ತಿಳಿದಿರುವುದು ಈ ಕಣ್ಣಿಗೆ ಕಾಣಿಸುವ ಶರೀರ ಒಂದೇ. ಆದರೆ ನಮ್ಮ ಕಣ್ಣಿಗೆ ಕಾಣಿಸದಂತೆ ಇನ್ನೂ ಆರು ಶರೀರಗಳಿವೆ. ಅವು ಜ್ಞಾನವುಳ್ಳವರಿಗೆ ತಿಳಿಯುತ್ತವೆ. ಈ ವಿಷಯವು ಅಜ್ಞಾನದಲ್ಲಿ ಇರುವವರಿಗೆ ತಿಳಿಯದು. ನಾವೆಲ್ಲ ಜ್ಞಾನವನ್ನು ಬೆಳೆಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದೇವೆ ಅಂದರೆ ಕಣ್ಣಿಗೆ ಕಾಣಿಸದವುಗಳ ಕುರಿತು ಕೂಡ ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ತಿಳಿದುಕೊಳ್ಳಬೇಕಲ್ಲವೇ? ಇಲ್ಲದಿದ್ದರೆ ನಿಮ್ಮ ಜೀವನವೆಲ್ಲ ಅಯೋಮಯವೇ.. ಅಂಧಕಾರವೇ.

ಆದ್ದರಿಂದ ಇರುವುದು ಒಂದು ಶರೀರವಲ್ಲ ಅಂತರ್ಲೀನವಾಗಿ ಆರು ಶರೀರಗಳು ಇವೆ. ಆದ್ದರಿಂದ ಒಟ್ಟು ಈ ಏಳು ಶರೀರಗಳ ಕುರಿತು ತಿಳಿದುಕೊಳ್ಳೋಣ.

1) **ಫಿಸಿಕಲ್ ಬಾಡಿ:** ಫಿಸಿಕಲ್ ಬಾಡಿ ಅಂದರೆ ಸ್ಥೂಲ ಶರೀರ. ಇದನ್ನೇ ಶಂಕರಾಚಾರ್ಯರು ಅನ್ನಮಯ  ಕೋಶ ಎಂದಿದ್ದಾರೆ.

2) **ಎಥಿರಿಕ್ ಬಾಡಿ:** ಎಥಿರಿಕ್ ಬಾಡಿ ಎಂದರೆ ಕಾಂತಿಮಯ ಶರೀರ. ಇದನ್ನೇ "ಪ್ರಾಣಮಯ ಕೋಶ" ಎಂದು ಕೂಡ ಕರೆಯುತ್ತಾರೆ.

3) **ಆಸ್ಟ್ರಲ್ ಬಾಡಿ ಅಥವಾ ಮೆಂಟಲ್ ಬಾಡಿ:** ಆಸ್ಟ್ರಲ್ ಬಾಡಿ ಅಥವಾ ಮೆಂಟಲ್ ಬಾಡಿ ಎಂದರೆ ಸೂಕ್ಷ್ಮ ಶರೀರ ಅಥವಾ  ಭಾವನಾಮಯ ಕೋಶ. ಇದನ್ನೇ ಮನೋಮಯ ಕೋಶವೆಂತಲು ಕೂಡ ಕರೆಯುವರು. ಇವುಗಳನ್ನೆಲ್ಲ ನಾವು ಏಕೆ ಇಷ್ಟು ಆಳವಾಗಿ ತಿಳಿದುಕೊಳ್ಳಬೇಕು ಎಂದರೆ ಒಬ್ಬೊಬ್ಬ ಯೋಗೀಶ್ವರನು ಒಂದೊಂದನ್ನು ಹೇಳುತ್ತಿರುತ್ತಾನೆ. ಅವುಗಳನ್ನೆಲ್ಲ ತಿಳಿದುಕೊಂಡರೆ ಗೊಂದಲವಿರುವುದಿಲ್ಲ.

ಅದೇ ತಿಳಿಯದಿದ್ದರೆ.. ಆತನು ಹಾಗೆ ಹೇಳಿದ್ದಾನೆ, ಈತನು ಹೀಗೆ ಹೇಳಿದ್ದಾನೆ ಎಂದು ಗೊಂದಲದಲ್ಲಿ ಬೀಳುತ್ತೇವೆ. ಆದ್ದರಿಂದ ಇವುಗಳನ್ನು ಸಂಪೂರ್ಣವಾಗಿ ತಿಳಿದುಕೊಳ್ಳಬೇಕು. ಒಂದು ರೀತಿಯಲ್ಲಿ ಹೇಳಬೇಕೆಂದರೆ ಕಂಠಪಾಠ ಮಾಡಬೇಕು. ಕಂಠಸ್ತ ಮಾಡದಿದ್ದರೆ ನಿಮಗೆ ನಂತರ ಹೇಳುವಂತಹ ವಿಷಯಗಳು ಅರ್ಥವಾಗುವುದಿಲ್ಲ.

4) **ಕಾಜಲ್ ಬಾಡಿ:** ಅಂದರೆ ಕಾರಣ ಶರೀರ. ಇದನ್ನೇ ಶಂಕರಾಚಾರ್ಯರು "ವಿಜ್ಞಾನಮಯ ಕೋಶ" ಎಂದಿದ್ದಾರೆ.

5) **ಸ್ಪಿರಿಚುವಲ್ ಬಾಡಿ:** ಸ್ಪಿರಿಚುವಲ್ ಬಾಡಿ ಎಂದರೆ ಮಹಾಕಾರಣ ಶರೀರ.

ಇದನ್ನೇ "ಆನಂದಮಯಕೋಶ" ಎಂದು ಕೂಡ ಕರೆಯುತ್ತಾರೆ.

6) **ಕಾಸ್ಮಿಕ್ ಬಾಡಿ:** ಕಾಸ್ಮಿಕ್ ಬಾಡಿ ಅಂದರೆ ವಿಶ್ವಮಯ ಶರೀರ. ಇದನ್ನೇ "ವಿಶ್ವಮಯ ಕೋಶ" ಎಂದುಕೂಡ ಕರೆಯುತ್ತಾರೆ.

7) **ನಿರ್ವಾಣಿಕ್ ಬಾಡಿ**: ಅಂದರೆ "ನಿರ್ವಾಣಮಯ ಕೋಶ" ಇದನ್ನೇ ನಿರ್ವಾಣಮಯ ಕೋಶ ಎಂದು ಕೂಡ ಹೇಳುತ್ತಾರೆ.

ಹೀಗೆ ಏಳು ಶರೀರಗಳೊಂದಿಗೆ ಇದ್ದೇವೆ. ಆತ್ಮನ ಮೇಲೆ ಏಳು ಹೊದಿಕೆಗಳಿವೆ. ಇವುಗಳ ತಿಳಿವಳಿಕೆಯು ಕೂಡ ಇರಬೇಕು. ಹೀಗಾಗಿ ಯೋಗಿಗಳು ಯಾವುದಾದರೂ ತರಗತಿಗಳನ್ನು ಹೇಳುವಾಗ ಇವುಗಳನ್ನು ಉದಾಹರಿಸಿದಾಗ ನಿಮಗೆ ತಿಳಿದಿದ್ದರೆ ಆ ವಿಷಯಗಳು ಚೆನ್ನಾಗಿ ಅರ್ಥವಾಗುತ್ತವೆ ಇಲ್ಲದಿದ್ದರೆ ಅರ್ಥವಾಗದು. ಏನು ಹೀಗೆ ಹೇಳುತ್ತಿದ್ದಾರೆ ಎನ್ನುತ್ತೀರಿ.

ಅಷ್ಟೇ ಅಲ್ಲ, ಮಾನವನಿಗೆ ಚೈತನ್ಯವು ಭೌತಿಕ ಶರೀರದಲ್ಲಿ ಕೇಂದ್ರೀಕೃತವಾದಾಗ ಅಂದರೆ ಜಾಗೃತಾವಸ್ಥೆಯಲ್ಲಿರುವಾಗ ಈ ಸ್ಥೂಲ ವಿಶ್ವದಲ್ಲಿ ವಿಹರಿಸುತ್ತಾ ಕರ್ಮಗಳನ್ನು ಮಾಡುತ್ತಾ ಇರುತ್ತಾನೆ. ಭೌತಿಕ ಶರೀರದಲ್ಲಿ ಈ ಚೈತನ್ಯವಿದ್ದರೆ ಮಾನವನು ಎನ್ನುತ್ತಾರೆ.

ಅಂದರೆ ಈ ಜಾಗೃತಾವಸ್ಥೆಯಲ್ಲಿ ದಿನವೂ ಕರ್ಮಗಳನ್ನು ಮಾಡುತ್ತಾ ಇರುತ್ತಿರುತ್ತಾನೆ. ಈ ಸ್ಥೂಲ ವಿಶ್ವದಲ್ಲಿ ಎಂದಿದ್ದೇವೆ. ಈ ವಿಶ್ವದಲ್ಲಿ ನಮಗೆ ಎರಡು ರೀತಿಯ ಲೋಕಗಳು ಕಾಣಿಸುತ್ತವೆ. ಸ್ಥೂಲ ಲೋಕಗಳನ್ನೆಲ್ಲ ಸೇರಿಸಿದರೆ ಸ್ಥೂಲ ವಿಶ್ವ ಎನ್ನುತ್ತೇವೆ. ಸೂಕ್ಷ್ಮ ಲೋಕಗಳನ್ನೆಲ್ಲ ಸೇರಿಸಿದರೆ ಸೂಕ್ಷ್ಮ ವಿಶ್ವ ಎನ್ನುತ್ತೇವೆ. ಈ ಸ್ಥೂಲ ಲೋಕಗಳು ಕಣ್ಣಿಗೆ ಕಾಣಿಸುತ್ತಾ ಇರುತ್ತವೆ. ಸೂಕ್ಷ್ಮ ಲೋಕಗಳು ಕಣ್ಣಿಗೆ ಕಾಣಿಸುವುದಿಲ್ಲ.

ಹಾಗೆ ಈ ಸ್ಥೂಲ ಶರೀರದೊಳಗೆ ನೀವು ಪ್ರವೇಶಿಸುವ ಮೊದಲೇ ಅಂದರೆ ಆತ್ಮಪ್ರವೇಶಿಸುವ ಮೊದಲೇ ಮೇಲಿನ ಲೋಕಗಳಲ್ಲಿ ಒಂದು ಪ್ರಣಾಳಿಕೆಯನ್ನು ಹಾಕಿಕೊಂಡು ಕೆಳಗೆ ಬರುತ್ತೀರಿ. ಭೂಮಿಗೆ ಬಂದು ಒಬ್ಬ ತಾಯಿಯ ಗರ್ಭದಲ್ಲಿ ತಯಾರಾಗುವ ಶರೀರದೊಳಗೆ ಪ್ರವೇಶಿಸಿ ಜನ್ಮ ತೆಗೆದುಕೊಳ್ಳುತ್ತೀರಿ. ಜನ್ಮವನ್ನು ತೆಗೆದುಕೊಂಡಾಗಿನಿಂದ ಶರೀರವನ್ನು ಬಿಡುವವರೆಗೆ ಅನೇಕ ರೀತಿಯ ಕರ್ಮಗಳನ್ನು ಮಾಡುತ್ತಾ ಇರುತ್ತೀರಿ. ಪಾಪ ಕರ್ಮಗಳನ್ನು ಮಾಡುತ್ತೀರಿ, ಪುಣ್ಯ ಕರ್ಮಗಳನ್ನು ಮಾಡುತ್ತೀರಿ. ಸ್ವಲ್ಪ ಜ್ಞಾನವನ್ನು ಹೊಂದಿದವರು ಆತ್ಮ ಕರ್ಮಗಳನ್ನು ಮಾಡುತ್ತಾರೆ. ಅದನ್ನೇ ಭೌತಿಕ ಜೀವನ ಎನ್ನುತ್ತಾರೆ.

ಈ ರೀತಿಯಾಗಿ ಶರೀರದೊಳಗಿದ್ದು ಕರ್ಮಗಳನ್ನು ಮಾಡುತ್ತಿರುವ ಜೀವನವನ್ನು

ಭೌತಿಕ ಜೀವನ ಎನ್ನುತ್ತಾರೆ. ಪ್ರಾಪಂಚಿಕ ಜೀವನವೆಂದು ಕೂಡ ಹೇಳುತ್ತಾರೆ. ಹಾಗೆ ಮೇಲಿನ ಲೋಕಗಳಲ್ಲಿ ಎಲ್ಲಿಯವರೆಗೆ ಆಯಸ್ಸನ್ನು ನಿರ್ಣಯಿಸಿಕೊಂಡಿದ್ದೀರೋ ಅಲ್ಲಿಯವರೆಗೆ ಮಾಡುತ್ತಲೇ ಇರುತ್ತೀರಿ. ನೀವು ನಿರ್ಣಯಿಸಿಕೊಂಡ ಆಯಸ್ಸು ಪೂರ್ಣವಾದರೆ ನಿಮಗೆ ಮರಣವು ಸಂಭವಿಸುತ್ತದೆ. ಆಗ ಈ ಸ್ಥೂಲ ಶರೀರದೊಳಗಿನಿಂದ ಸೂಕ್ಷ್ಮ ಶರೀರವು ಬಿಡುಗಡೆಯಾಗುತ್ತದೆ. ಈ ಸೂಕ್ಷ್ಮ ಶರೀರ ಹಾಗೂ ಸ್ಥೂಲ ಶರೀರದ ಮಧ್ಯೆ ಕಾಂತಿಮಯ ಶರೀರ ಅಂದರೆ ಪ್ರಾಣಮಯ ಶರೀರವೊಂದಿದೆ. ಅದು ಭೌತಿಕ ಶರೀರವನ್ನು ಸುಡದಿದ್ದರೆ ಅದನ್ನೇ ಅಂಟಿಕೊಂಡು ಇರುತ್ತದೆ. ಎರಡು ಮೂರು ದಿನಗಳಿದ್ದು ನಂತರ ಸಹಜವಾಗಿ ತನ್ನಷ್ಟಕ್ಕೆ ತಾನೇ ಬಿದ್ದು ಹೋಗುತ್ತದೆ. ಅದೇ ಈ ಭೌತಿಕ ಶರೀರವನ್ನು ಸುಟ್ಟರೆ ಅದೃಶ್ಯವಾಗಿ ಬಿಡುತ್ತದೆ.

ಆಗ ಈ ಸೂಕ್ಷ್ಮ ಶರೀರದೊಂದಿಗೆ ಇವರನ್ನು ಸೂಕ್ಷ್ಮ ಲೋಕಗಳಿಗೆ ಕರೆದುಕೊಂಡು ಹೋಗುವುದಕ್ಕೆ ಬಂದಿರುವಂತಹ ಸಹಾಯಕರೊಂದಿಗೆ ಭೂಮಿಯ ಮೇಲೆ ತಾನು ಮಾಡಿದ ಕರ್ಮಗಳನ್ನಾಧರಿಸಿ ಆ ಸೂಕ್ಷ್ಮ ಲೋಕಗಳನ್ನು ಸೇರಿಕೊಳ್ಳುತ್ತೀರಿ. ನಮಗೆ ಪತ್ರೀಜಿಯವರು ಹೇಳಿದ್ದಾರೆ, ಪಾಪ ಕರ್ಮಗಳನ್ನು ಮಾಡಿದವನು ಭುವರ್‌ಲೋಕವನ್ನು, ಪುಣ್ಯಗಳನ್ನು ಮಾಡಿದವನು ಸುವರ್‌ಲೋಕವನ್ನು ಸೇರಿಕೊಂಡ ನಂತರ ಕೆಲವು ದಿನಗಳು ವಿಶ್ರಾಂತಿಯನ್ನು ತೆಗೆದುಕೊಂಡು ನಂತರ ಆ ಜನ್ಮದಲ್ಲಿ ಭೂಮಿಯ ಮೇಲೆ ಮಾಡಿರುವಂತಹ ಕರ್ಮಗಳನ್ನು ನೋಡಿಕೊಳ್ಳುತ್ತಾರೆ.

ಅರೇ! ಮಾಡಬೇಕಾದದ್ದು ಮಾಡದೇ, ಏನೇನೋ ಮಾಡಿದ್ದೇನೆ ಎಂದು ಪಶ್ಚಾತ್ತಾಪ ಪಡುತ್ತೀರಿ. ಪಶ್ಚತ್ತಾಪಪಟ್ಟು ಈ ಬಾರಿಯಾದರೂ ಮತ್ತೆ ದೇಹವನ್ನು ತೆಗೆದುಕೊಂಡು ಅಂದುಕೊಂಡದ್ದನ್ನು ಸಾಧಿಸುತ್ತೇನೆ ಎಂದು ನಿರ್ಣಯಿಸಿಕೊಂಡು ತನಗೆ ಇರುವಂತಹ ಸೂಕ್ಷ್ಮ ಶರೀರವನ್ನು ಅಂದರೆ ಮನೋಮಯ ಶರೀರವನ್ನು ಸೂಕ್ಷ್ಮ ಲೋಕಗಳಲ್ಲಿ ಬಿಟ್ಟುಬಿಡುತ್ತಾರೆ. ಅದು ಇದ್ದರೆ ಆ ಲೋಕಗಳನ್ನು ದಾಟಿ ಮೇಲಿನ ಲೋಕಗಳಿಗೆ ಅಂದರೆ ಜನಾ ಲೋಕವನ್ನು ಸೇರಲಾರರು.

ಹಾಗೆಯೇ ಸೂಕ್ಷ್ಮ ಶರೀರವನ್ನು ಬಿಟ್ಟು ಕಾರಣಲೋಕಗಳಿಗೆ ಅಂದರೆ ಜನಾ ಲೋಕಕ್ಕೆ ಸೇರಿಕೊಳ್ಳುತ್ತಾರೆ. ಅಲ್ಲಿಗೆ ಸೇರಿಕೊಂಡ ಮೇಲೆ ತನ್ನ ಸ್ವಂತ ಬಿಂಬವನ್ನು ಅಂದರೆ ಸೂತ್ರಾತ್ಮನನ್ನು ಅಂದರೆ ಕಾರಣ ದೇಹವನ್ನು ಸೇರಿಕೊಳ್ಳುತ್ತಾರೆ. ನಿಜವಾಗಿಯೂ ಆ ಬಿಂಬವು ಎಂದಿಗೂ ಕಾರಣಲೋಕವನ್ನು ಬಿಡುವುದಿಲ್ಲ. ಭೂಲೋಕಕ್ಕೆ ಬಂದರೂ ಸಮಾಂತರ ಲೋಕಗಳನ್ನು

ಸೇರಿಕೊಂಡರೂ ಪ್ರತಿಬಿಂಬ ತಿರುಗಿ ತನ್ನ ಸ್ವಂತ ಬಿಂಬವನ್ನು ಸೇರಿಕೊಳ್ಳುತ್ತದೆ.

ಅದರೊಳಗಿನಿಂದ ಉದ್ಭವಿಸಿದ ಒಂದು ಪ್ರತಿಬಿಂಬವೇ ಭೂಲೋಕಕ್ಕೆ ಬಂದು ಕರ್ಮಗಳನ್ನು ಮಾಡಿ ಶರೀರವನ್ನು ಬಿಟ್ಟು ಸೂಕ್ಷ್ಮ ಲೋಕಗಳಲ್ಲಿ ಕರ್ಮಫಲಗಳನ್ನು ಅನುಭವಿಸಿ ಪುನಃ ತನ್ನ ಮೂಲ ಬಿಂಬದಲ್ಲಿ ತಾನು ಲೀನವಾಗುತ್ತದೆ. ಈ ಪರ್ಯಟನೆಯಿಂದ ಒಟ್ಟಾಗಿ ಬರುವ ಫಲವೇ ಜ್ಞಾನವು.

ಪತ್ರೀಜಿಯವರು ಹೇಳಿರುವಂತಹ ಈ ಸಂದೇಶವನ್ನು ಅರ್ಥಮಾಡಿಕೊಳ್ಳುವುದಕ್ಕೆ ನನಗೆ ಬಹಳ ಹಿಡಿಯಿತು. ಪತ್ರೀಜಿಯವರಿಗೆ ಅಪಾರವಾದ ಜ್ಞಾನವಿದೆ. ಆದರೆ, ನಮಗೆ ಹೇಳಿದರೂ ಅರ್ಥಮಾಡಿಕೊಳ್ಳಲಾರೆವೆಂದು ನಾವು ಅರ್ಥಮಾಡಿಕೊಳ್ಳುವಷ್ಟು ಮಾತ್ರ ಆತನು ಹೇಳುತ್ತಿದ್ದಾನೆಂದು ನನಗೆ ಅರ್ಥವಾಯಿತು. ಆತನು ಇನ್ನೂ ಆಳವಾಗಿ ಹೇಳಿದರೂ ನಮಗೆ ಗೊಂದಲವೇ...

ಇದೆಲ್ಲಾ ಪತ್ರೀಜಿಯವರು ಹೇಳಿರುವಂತಹ ಜ್ಞಾನವೇ. ಈ ವಿಷಯಗಳು ಯಾರಿಗೆ ತಿಳಿಯುತ್ತವೆ ರೀ. ಪೂರ್ಣಾತ್ಮನಿಂದ ಬಿಡುಗಡೆಯಾದಂತಹ ಆತ್ಮನನ್ನು ಅಂಶಾತ್ಮ ಎನ್ನುತ್ತಾರೆ ಎಂದು ನಾವು ಹೇಳಿಕೊಂಡಿದ್ದೇವೆ ಈ ಅಂಶಾತ್ಮ ಮಾನವ ಶರೀರದಲ್ಲಿ ಪ್ರವೇಶಿಸಿದರೆ ಜೀವಾತ್ಮವಾಗುತ್ತದೆ ಎಂದು ಹೇಳಿಕೊಂಡಿದ್ದೇವೆ.

ಈ ಅಂಶಾತ್ಮ ಮಾನವ ಶರೀರದಲ್ಲಿ ಪ್ರವೇಶಿಸುವ ಮೊದಲು ಕಾರಣಲೋಕಕ್ಕೆ ಸೇರಿಕೊಳ್ಳುತ್ತದೆಯಂತೆ. ಈ ಕಾರಣಲೋಕದೊಳಗೆ ಇರುವುದನ್ನೇ ಬಿಂಬವು ಎನ್ನುತ್ತಾರೆ. ಅದರೊಳಗಿಂದ ಉದ್ಭವಿಸಿದ ಪ್ರತಿಬಿಂಬವೇ ಭೂಮಿಯಲ್ಲಿ ತಾಯಿ ಗರ್ಭದೊಳಗೆ ತಯಾರಾಗುವ ಶರೀರದಲ್ಲಿ ಪ್ರವೇಶಿಸಿ ಜನ್ಮ ತೆಗೆದುಕೊಳ್ಳುತ್ತದೆ. ಕರ್ಮಗಳನ್ನು ಮಾಡುತ್ತದೆ ಹಾಗೆ ಜನ್ಮಗಳು ಹೆಚ್ಚಿದಾಗ ಜ್ಞಾನವನ್ನು ಕೂಡ ಹೆಚ್ಚಿಸಿಕೊಳ್ಳುತ್ತದೆ.

ಹಾಗೆಯೇ ಆ ಬಿಂಬವು ಕಾರಣಲೋಕದಲ್ಲಿರುವಷ್ಟು ಕಾಲವು ಜನ್ಮಗಳನ್ನು ತೆಗೆದುಕೊಳ್ಳುತ್ತಲೇ ಇರುತ್ತದೆ. ಯಾವಾಗ ಜ್ಞಾನವು ಬೆಳೆಯುತ್ತಿರುತ್ತದೆಯೋ ಆಗ ಆ ಸ್ಥಿತಿಯನ್ನು ದಾಟಿ ಹೋಗುತ್ತಾ ಇರುತ್ತದೆ. ಇದೆಲ್ಲವೂ ಚೆನ್ನಾಗಿ ಅರ್ಥವಾಗಬೇಕೆಂದರೆ 'ಮರಣಿಸುವ ಮೊದಲೇ ಮರಣಿಸಬೇಕು' ಎಂಬ ಪುಸ್ತಕವನ್ನು ಚೆನ್ನಾಗಿ ಓದಿ ಅರ್ಥೈಸಿಕೊಳ್ಳಬೇಕು.

ಹೀಗೆ ತಿಳಿದುಕೊಳ್ಳಬೇಕಾಗಿರುವುದು ಇನ್ನೂ ಎಷ್ಟೋ ಇದೆ. ಅವೆಲ್ಲವನ್ನು ತಿಳಿದುಕೊಳ್ಳಬೇಕೆಂದರೆ ಇನ್ನು ಎಷ್ಟೋ ಜನ್ಮ ಹಿಡಿಯುತ್ತದೆ. ಆದ್ದರಿಂದ ಆ ಜ್ಞಾನವನ್ನು ಬೋಧಿಸಬಲ್ಲವರನ್ನು ಆಶ್ರಯಿಸಬೇಕು, ಅವರನ್ನು ಹಿಡಿದುಕೊಳ್ಳಬೇಕು. ಆ ಜ್ಞಾನವನ್ನು ಅರ್ಥಮಾಡಿಕೊಳ್ಳಬೇಕು

ಅಂದರೆ ಮೊದಲು ನಿಮ್ಮ ಬುದ್ಧಿಯನ್ನು ಚೆನ್ನಾಗಿ ಬೆಳೆಸಿಕೊಳ್ಳಬೇಕು. ಆಗ ಅವರು ಹೇಳಿದ್ದು ಅರ್ಥವಾಗುತ್ತದೆ ಇಲ್ಲದಿದ್ದರೆ ಎಷ್ಟು ಹೇಳಿದರೂ ಅರ್ಥವಾಗದು.

ನಾನು ಅದಕ್ಕೆ ಹೇಳುತ್ತೇನೆ ಪತ್ರೀಜಿಯವರಂತಹ ಗುರು ದೊರಕುವುದು ಬಹಳ ಕಷ್ಟ. ಅಂತಹ ಗುರುವು ದೊರಕಿದರೂ ಆತನು ಬೋಧಿಸಿದ ಜ್ಞಾನವನ್ನು ಅರ್ಥಮಾಡಿಕೊಳ್ಳದಿದ್ದರೆ ಅವನಿಗಿಂತ ದುರದೃಷ್ಟವಂತ ಯಾವನೂ ಇಲ್ಲ. ಅಪಾರವಾದ ಜ್ಞಾನವನ್ನು ಬೋಧಿಸಿದನಾತನು. ಆ ಜ್ಞಾನವನ್ನು ಹೊಂದುವುದಕ್ಕೆ 'ಶ್ವಾಸದ ಮೇಲೆ ಗಮನ' ಧ್ಯಾನವನ್ನು ಮಾಡಿರಿ ಎಂದಿದ್ದಾರೆ.

ಅದನ್ನು ಬಿಟ್ಟು ಸಂಗೀತವನ್ನು ಇಟ್ಟುಕೊಂಡು, ಗೈಡಿಂಗ್‌ಗಳು, ದೊಡ್ಡ ದೊಡ್ಡ ಶಬ್ದಗಳ ರೆಕಾರ್ಡ್‌ಗಳನ್ನು ಇಟ್ಟುಕೊಂಡರೆ ಇವರಿಗೆ ಜ್ಞಾನವೇನು ಬರುತ್ತದೆ? ಏನು ತಿಳಿಯುತ್ತವೆ?. ಆದ್ದರಿಂದ ಈಗಲಾದರೂ ಜ್ಞಾನದ ಮೇಲೆ ದೃಷ್ಟಿ ಇಡಿ.

ಈ ವಿಧವಾಗಿ ಪ್ರತಿ ಜನ್ಮದಲ್ಲೂ ಆತ್ಮವು ಸ್ವಲ್ಪ ಜ್ಞಾನವನ್ನು ಗಳಿಸಿದರೆ ಅಂದರೆ ಸಂಪಾದಿಸಿಕೊಂಡರೆ ಕ್ರಮವಾಗಿ ಒಂದೊಂದು ಲೋಕವನ್ನು ದಾಟುತ್ತಾ ಪೂರ್ಣ ಆತ್ಮಜ್ಞಾನ ಲಭಿಸುವುದರಿಂದ ಕಾರಣಲೋಕಗಳನ್ನು ಬಿಟ್ಟು ಅಂದರೆ ಅಲ್ಲಿಯವರೆಗೆ ಇದ್ದ ಆ ಜನಾಲೋಕವನ್ನು ಬಿಟ್ಟು ಮಹಾ ಕಾರಣಲೋಕಗಳಿಗೆ ಪ್ರವೇಶಿಸುತ್ತದೆ. ಆ ಬಿಂಬಾತ್ಮ ಕಾರಣ ಲೋಕಗಳಲ್ಲಿ ಇರುವವರೆಗೂ ಜನ್ಮವು ತಪ್ಪದು. ಆನಂತರ ಬೇಕು ಅಂದರೆ ಬರುತ್ತದೆ ಇಲ್ಲದಿದ್ದರೆ ಇಲ್ಲ.

ಆದ್ದರಿಂದ ತನ್ನನ್ನು ತಾನು ಸಂಪೂರ್ಣವಾಗಿ ತಿಳಿದುಕೊಳ್ಳುವುದೇ ಜನ್ಮರಾಹಿತ್ಯ ಪದವಿಯನ್ನು ಹೊಂದುವುದು. ಅಂದರೆ ಮೋಕ್ಷವನ್ನು ಹೊಂದುವುದು. ಅಂದರೆ ಹಾಗೆ ಹೊಂದುವುದರಿಂದ ಈ ಅಂಶಾತ್ಮವೂ ಯಾವ ಪೂರ್ಣಾತ್ಮನಿಂದಾದರೆ ಬೇರ್ಪಟ್ಟಿತೋ ಆ ಪೂರ್ಣಾತ್ಮನೊಂದಿಗೆ ಸಾರೂಪ್ಯವನ್ನು, ಸಾಮಿಪ್ಯವನ್ನು, ಸಾಲೋಕ್ಯವನ್ನು, ಕೊನೆಗೆ ಸಾಯುಜ್ಯವನ್ನು ಅಂತಿಮ ಕಾಲದಲ್ಲಿ ಹೊಂದುತ್ತದೆ. ಅಂದರೆ ಅಂಶಾತ್ಮವೊಂದರ ಪ್ರಯಾಣವು ಪೂರ್ತಿಯಾಗುತ್ತದೆ. ಒಂದು ರೀತಿಯಲ್ಲಿ ಹೇಳಬೇಕೆಂದರೆ ಇದು ಮೊದಲನೆಯ ಪ್ರಯಾಣವೆಂದುಕೊಳ್ಳಬಹುದು. ನಂತರ ಇನ್ನೂ ಇರುತ್ತದೆ.

ಹೀಗೆ ಹೊಂದಿದ ಮೋಕ್ಷವನ್ನು ಅಂದರೆ ಮುಕ್ತಿಯನ್ನು ನಾಲ್ಕು ರೀತಿಯಲ್ಲಿ ವಿವರಿಸಲಾಗಿದೆ ಅವುಗಳನ್ನು ಸ್ವಲ್ಪ ತಿಳಿದುಕೊಳ್ಳೋಣ.

ಇಲ್ಲಿ ನಾವು ನಾಲ್ಕು ರೀತಿಯ ಮುಕ್ತಿಗಳಿವೆ ಎಂದು ಹೇಳಿಕೊಂಡಿದ್ದೇವೆ.

1) ಸಾರೂಪ್ಯ ಮುಕ್ತಿ 2) ಸಾಮೀಪ್ಯ ಮುಕ್ತಿ

3) ಸಾಲೋಕ್ಯ ಮುಕ್ತಿ 4) ಸಾಯುಜ್ಯ ಮುಕ್ತಿ

1) ಸಾರೂಪ್ಯ ಮುಕ್ತಿ ಅಂದರೆ ಸಕಲ ಪಾಪಗಳಿಂದ ಬಿಡುಗಡೆಗೊಂಡವನು. ಭಗವಂತನ ಸಾರೂಪ್ಯವನ್ನು ಅಂದರೆ ಆತನ ಸ್ವರೂಪವನ್ನು ಹೊಂದುತ್ತಾನೆ ಎಂದು ಅರ್ಥ ಇವನು ಭಗವಂತನಾಗುತ್ತಾನೆ ಇದನ್ನೇ ಸಾರೂಪ್ಯ ಮುಕ್ತಿ ಎನ್ನುತ್ತಾರೆ.

2) ಸಾಮೀಪ್ಯ ಮುಕ್ತಿ ಅಂದರೆ ಬ್ರಹ್ಮ ಜ್ಞಾನದ ಮೇಲೆ ಅಪೇಕ್ಷೆಯುಳ್ಳ ಮಾನವನು ಅನ್ಯ ಚಿಂತೆಗಳು ಇಲ್ಲದವನಾಗಿ, ಅಂದರೆ ಉಳಿದ ಪ್ರಾಪಂಚಿಕ ವ್ಯವಹಾರಗಳ ಕುರಿತು ಆಲೋಚಿಸದೆ ಸದಾಚಾರವಂತನಾಗಿ, ಮೆಲ್ಲಗೆ ಆ ಭಗವಂತನ ಸಾಮೀಪ್ಯವನ್ನು ಅಂದರೆ ಆ ಭಗವಂತನನ್ನು ಸೇರುತ್ತಾನೆ ಎಂದು ಅರ್ಥ. ಅಂದರೆ ಆ ಪೂರ್ಣಾತ್ಮನಿರುವ ಸತ್ಯ ಲೋಕವನ್ನು ಸೇರಿಕೊಳ್ಳುತ್ತಾನೆ ಎಂದು ಅರ್ಥ. ಆ ಭಗವಂತನನ್ನು ಹೊಂದುವುದಕ್ಕೆ ಮಾಡಬೇಕಾದ ಎಲ್ಲವನ್ನೂ ಮಾಡುತ್ತಿರುವವನನ್ನೇ ಸದಾಚಾರವಂತನು ಎನ್ನುತ್ತಾರೆ.

ನಮಗೆ ಭಗವದ್ಗೀತೆಯ ಎಂಟನೇ ಅಧ್ಯಾಯ 16ನೇ ಶ್ಲೋಕದಲ್ಲಿ ಏನು ಹೇಳಿದ್ದಾರೆ ಎಂದರೆ.

ಶ್ಲೋಕ: ಆ ಬ್ರಹ್ಮ ಭುವನಾಲ್ಲೋಕಾಃ ಪುನರಾವರ್ತಿನೋರ್ಜುನ !

ಮಾಮುಪೇತ್ಯಂತು ಕೌಂತೇಯ ಪುನರ್ಜನ್ಮ ನ ವಿದ್ಯತೇ !! (ಭ.ಗೀತೆ. 8–16)

ತಾತ್ಪರ್ಯ: ನೀನು ಆ ಬ್ರಹ್ಮ ಲೋಕಗಳಂತಹ ಲೋಕಗಳಿಗೆ ಅಂದರೆ ತಪೋಲೋಕಗಳಿಗೆ ಹೋದರೂ ಕೂಡ ಮತ್ತೆ ಭೂಮಿಯ ಮೇಲೆ ಬರುವೆ. ಆದರೆ, ನಾನು ಇರುವಂತಹ ಸತ್ಯ ಲೋಕವನ್ನು ಸೇರಿಕೊಂಡರೆ ಮತ್ತೆ ನಿನಗೆ ಮಾನವನ ಲೋಕಕ್ಕೆ ಬರಬೇಕಾದ ಅಗತ್ಯವಿಲ್ಲ ಅದನ್ನೇ ಮುಕ್ತಿ, ಮೋಕ್ಷ ಎನ್ನುತ್ತಾರೆ. ಇದನ್ನೇ ಸಾಮೀಪ್ಯ ಮುಕ್ತಿ ಎನ್ನುತ್ತಾರೆ.

3) ಸಾಲೋಕ್ಯ ಮುಕ್ತಿ: ಅಂದರೆ ಬ್ರಹ್ಮ ಜ್ಞಾನವನ್ನು ಹೊಂದುವುದರಿಂದ ಭಗವಂತನನ್ನು ಸೇರಬಲ್ಲವನಾಗುತ್ತಾನೆ. ಇದರಿಂದ ಕೂಡ ಭಗವಂತನು ಇರುವ ಸತ್ಯ ಲೋಕ ಸೇರಬಲ್ಲನು. ಇದನ್ನು ಸಾಲೋಕ್ಯ ಮುಕ್ತಿ ಎನ್ನುವರು. ಕೊನೆಗೆ ನಡೆಯುವುದು ಅದೇ. ಏನೇ ಆಗಲಿ ಜ್ಞಾನವನ್ನು ಸಂಪಾದಿಸಿಕೊಳ್ಳುತ್ತಾ ಪೂರ್ಣ ಜ್ಞಾನವನ್ನು ಹೊಂದಿ ಆ ಪೂರ್ಣಾತ್ಮ ಅಂದರೆ ಆ ಭಗವಂತನು ಇರುವ ಸತ್ಯ ಲೋಕವನ್ನು ಸೇರಬೇಕು.

4) ಸಾಯುಜ್ಯ ಮುಕ್ತಿ ಅಂದರೆ ಗುರು ಉಪದೇಶಿಸಿದ ಧ್ಯಾನ ಮಾರ್ಗದಲ್ಲಿ, ಆತ್ಮದೊಂದಿಗೆ ಅನುಸಂಧಾನವಾಗಿ ಭ್ರಮರ ಕೀಟದ ನ್ಯಾಯದಂತೆ, ಯಾವಾಗಲೂ ಒಬ್ಬ ರಮಣ ಮಹರ್ಷಿಯಂತೆ, ಒಬ್ಬ ರಾಮಕೃಷ್ಣ ಪರಮಹಂಸರಂತೆ ತಿಂಗಳುಗಳು, ವರ್ಷಗಳಿದ್ದುಬಿಡುತ್ತಾರೆ.

ಶಿರಡಿ ಸಾಯಿಬಾಬಾ ಹೇಳಿದ್ದಾರಲ್ಲ 13 ವರ್ಷಗಳು ನಾನು ನನ್ನ ಗುರುವಿನೊಂದಿಗೆ ಇದ್ದೇನೆಂದು. ಪತ್ರೀಜಿಯವರು ಕೂಡ ನಾನು ಒಂದು ಜನ್ಮದಲ್ಲಿ ಪೂರ್ತಿಯಾಗಿ ಧ್ಯಾನದಲ್ಲಿ ಇದ್ದೇನೆ ಎಂದು ಹೇಳಿದ್ದಾರೆ.

ಅಂದರೆ ಕೀಟವನ್ನು ಗೂಡಿನಲ್ಲಿಟ್ಟು ಭ್ರಮರ ಝೇಂಕಾರನಾದ ಮಾಡುವುದರಿಂದ ಆ ಕೀಟವು ಭ್ರಮರವಾಗಿ ಬದಲಾಗಿಬಿಡುತ್ತದೆ. ಹಾಗೆಯೇ ಆತ್ಮದೊಂದಿಗೆ ತಿಂಗಳುಗಳವರೆಗೆ, ವರ್ಷಗಳವರೆಗೆ ಹಾಗೆ ಇದ್ದು ಬಿಡುವುದರಿಂದ ಆ ಆತ್ಮಶಕ್ತಿಗಳೆಲ್ಲ ಇವರಿಗೆ ಲಭಿಸಿ ಇವರು ಆ ಭಗವಂತನು ಆಗಿಬಿಡುತ್ತಾರೆ. ಕೀಟವು ಭ್ರಮರವಾದಂತೆ ಈ ಮಾನವನು ಕೂಡ ಮಾಧವನಾಗಿಬಿಡುತ್ತಾನೆ.

ಒಂದು ಕಬ್ಬಿಣದ ತುಂಡಿಗೆ ಆಯಸ್ಕಾಂತವನ್ನು ತಾಗಿಸಿಟ್ಟರೆ ಕೆಲವು ದಿನಗಳಲ್ಲಿ ಈ ಕಬ್ಬಿಣದ ತುಂಡು ಕೂಡ ಆಯಸ್ಕಾಂತ ಶಕ್ತಿಯನ್ನು ಗಳಿಸಿಕೊಂಡು ಅದು ಕೂಡ ಕಬ್ಬಿಣದ ತುಂಡುಗಳನ್ನು ಆಕರ್ಷಿಸುತ್ತದೆ. ಹಾಗೆ ಇವನು ಕೂಡ ಭಗವಂತನ ಸ್ಥಿತಿಯನ್ನು ಹೊಂದುತ್ತಾನೆ. ಅಂದರೆ ಭಗವಂತನ ಸಾಯುಜ್ಯವನ್ನು ಹೊಂದುತ್ತಾನೆ. ಇದನ್ನೇ ಸಾಯುಜ್ಯ ಮುಕ್ತಿ ಎನ್ನುವರು.

ಹೀಗೆ ಈ ಮುಕ್ತಿಗಳಲ್ಲಿ ಯಾವುದನ್ನು ಸಾಧಿಸಿದರೂ ತಾನು ಪರಮಾತ್ಮನಾಗಿ, ನಕ್ಷತ್ರವಾಗಿ ಚಿರಕಾಲವೂ ಅಚಲವಾಗಿ, ಸ್ವಯಂಭುವಾಗಿ, ಆದಿತ್ಯನಾಗಿ, ಸರ್ವ ಲೋಕ ಜ್ಞಾನಪ್ರದಾತನಾಗಿ, ಶಕ್ತಿಪ್ರದಾತನಾಗಿ ನಿಂತುಬಿಡುತ್ತಾನೆ. ಈಗ ಈ ಪ್ರಯಾಣದಲ್ಲಿ ಸಾಧಕನು ತಾನು ಮಾಡುವ ಸಾಧನೆಯನ್ನು ಆಧರಿಸಿ ಒಂದೊಂದು ಬಾರಿ ಒಂದೊಂದು ಲೋಕಕ್ಕೆ ಹೋಗುತ್ತಾ ಇರುತ್ತಾನೆ.

ಆ ಸ್ಥಿತಿಯನ್ನು ಸಂಪಾದಿಸಿದವರು ಆಯಾ ಲೋಕಗಳ ಪರಿಧಿಯನ್ನಾಧರಿಸಿ ಆಯಾ ಶರೀರಗಳನ್ನು ಸಹಜವಾಗಿ ತನ್ನಷ್ಟಕ್ಕೆ ತಾನೇ ಬದಲಾಯಿಸಿಕೊಂಡು ಹೋಗುತ್ತಿರುತ್ತಾರೆ.

ಉದಾ: ನಮಗೆ ಷಾರ್ ರಾಕೆಟ್ ಕೇಂದ್ರದಲ್ಲಿ ರಾಕೆಟ್‌ಗಳು ಹೋಗುತ್ತಿರುತ್ತವೆ, ಆ ರಾಕೆಟ್ ಪ್ರಯಾಣ ಮಾಡುತ್ತಾ ಮಾಡುತ್ತಾ ಅದು ಕಕ್ಷೆ ಅಂದರೆ ಮಾರ್ಗವನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ.

ಹಾಗೆಯೇ ಹೋಗದು. ಆ ಕಡೆಗೋ ಈ ಕಡೆಗೋ ತಿರುಗಬೇಕಾಗುತ್ತದೆ. ಆಗ ಅಲ್ಲಿಯವರೆಗೆ ಇಂಧನವಾಗಿ ಉಪಯೋಗಿಸಲ್ಪಟ್ಟದ್ದನ್ನು ಅಲ್ಲಿ ಬಿಟ್ಟುಬಿಡುತ್ತಾ ಇರುತ್ತದೆ. ಹಾಗೆ ಲೋಕವನ್ನಾಧರಿಸಿ ಆತ್ಮವೂ ಶರೀರವನ್ನು ಬದಲಾಯಿಸಿಕೊಳ್ಳುತ್ತಾ ಇರುತ್ತದೆ.

ಏಕೆಂದರೆ ಮೇಲಿನ ಲೋಕಗಳಿಗೆ ಅಂದರೆ ಊರ್ಧ್ವಲೋಕಗಳಿಗೆ ಸೇರಿದಂತೆಲ್ಲ ಆ ಲೋಕಗಳು ಬಹಳ ಸೂಕ್ಷ್ಮವಾಗಿರುತ್ತವೆ. ಎಷ್ಟು ಸೂಕ್ಷ್ಮವಾಗಿ ಇದ್ದರೆ ಅಷ್ಟು

ಮೇಲಿನ ಲೋಕಗಳಿಗೆ ಹೋಗುತ್ತಾರೆ.

ಅದಕ್ಕೆ ನೀವು ಗಮನಿಸಿರಿ, ಒಟ್ಟು ಏಳು ಶರೀರಗಳನ್ನು ತಿಳಿದುಕೊಂಡಿದ್ದೇವೆ. ಚೆನ್ನಾಗಿ ಸ್ಥೂಲವಾಗಿರುವುದು ಭೌತಿಕ ಶರೀರ. ನಂತರ ಪ್ರಾಣಮಯ ಶರೀರ, ನಂತರ ಮನೋಮಯ ಶರೀರ, ಇನ್ನೂ ಸೂಕ್ಷ್ಮವಾದದ್ದು ಕಾರಣ ಶರೀರ, ಅದಕ್ಕಿಂತ ಸೂಕ್ಷ್ಮವಾದದ್ದು ಮಹಾ ಕಾರಣ ಶರೀರ, ಅದಕ್ಕಿಂತ ಸೂಕ್ಷ್ಮವಾದದ್ದು ವಿಶ್ವ ಮಯ ಶರೀರ, ಅದಕ್ಕಿಂತ ಸೂಕ್ಷ್ಮಾತಿ ಸೂಕ್ಷ್ಮವಾದದ್ದು ನಿರ್ವಾಣಮಯ ಶರೀರ. ಆಗ ಈ ಲೋಕಕ್ಕೆ ಸೇರಿಬಿಟ್ಟರೆ ಇರುವುದು ಆತ್ಮವೊಂದೇ. ಅದು ಮತ್ತೆ ಪೂರ್ಣಾತ್ಮವಾಗಿ ಬಿಡುತ್ತದೆ.

ಸುಮ್ಮನೆ ದಿನಾಲು ಬೆಳಗ್ಗೆ ಒಂದು ಗಂಟೆ ಸಾಯಂಕಾಲ ಒಂದು ಗಂಟೆ ಧ್ಯಾನದಲ್ಲಿ ಕುಳಿತು ನಿಮಗೆ ಆ ಸ್ಥಿತಿ ಬರಬೇಕೆಂದರೆ ಬರದು. ಈಗ ಜನರು ಯಾವುದೋ ಭೌತಿಕವಾದ ಸಮಸ್ಯೆಗಳಿವೆ ಎಂದು, ರೋಗಗಳು, ಮಾನಸಿಕ ಸಮಸ್ಯೆಗಳು, ಕುಟುಂಬ ಸಮಸ್ಯೆಗಳು, ಮಕ್ಕಳು, ತಂದೆ ತಾಯಿಗಳ ಗಂಡನೊಂದಿಗೆ ಜಗಳಗಳು ಇವೆ ಎಂದು ಅವುಗಳನ್ನು ತೊಲಗಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಈ ಧ್ಯಾನವು ಅದಕ್ಕಾಗಿಯೇ ಎಂದುಕೊಳ್ಳುತ್ತಿದ್ದಾರೆ.

ಆದರೆ, ಅವೆಲ್ಲವೂ ಅಲ್ಪವಾದವುಗಳು. ಈ ಧ್ಯಾನದ ಮೂಲಕ ನಿಜವಾದವು ಅಂದರೆ ಈ ರೀತಿಯಲ್ಲಿನ ಮುಕ್ತಿಗಳಲ್ಲಿ ಯಾವುದೋ ಒಂದು ಮುಕ್ತಿಯನ್ನು ಹೊಂದಬೇಕು. ಆ ಸತ್ಯ ಲೋಕವನ್ನು ಸೇರಬೇಕು. ಆ ಪೂರ್ಣಾತ್ಮವಾಗಬೇಕು. ಅದನ್ನು ಯಾರೇ ಆಗಲಿ ಸರಿ, ಮಾಡಬೇಕಾದದ್ದೇ, ಸಾಧಿಸಬೇಕಾದದ್ದೇ. ಈ ಪ್ರಯತ್ನವನ್ನು ಮಾಡಿದಾಗ ಉಳಿದವು ಸಹಜವಾಗಿ ಪರಿಷ್ಕಾರವಾಗುತ್ತವೆ.

ನೀವು ಈ ಪ್ರಯತ್ನವನ್ನು ಮಾಡಿರಿ ಎಷ್ಟು ಅವಕಾಶವಿದ್ದರೆ ಅಂತಹ ಸಮಯವನ್ನು ಉಪಯೋಗಿಸಿ ಈ ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನವನ್ನು ಮಾಡಿರಿ. ನೀವು ಹಾಗೆ ಮಾಡುತ್ತಾ ಇದ್ದರೆ, ನಿಮಗೆ ಕನಿಷ್ಠ ಮರುಜನ್ಮವಾದರೂ ಅನುಕೂಲವಾದ ಜನ್ಮಬರುತ್ತದೆ. ಅರ್ಜುನನು ಕೃಷ್ಣನನ್ನು ಕೇಳುತ್ತಾನೆ, ಈ ಜನ್ಮದಲ್ಲಿ ಮಾಡಲಾರದೆ ಹೋದರೆ, ಸಾಧಿಸದಿದ್ದರೆ ಏನು ಮಾಡಬೇಕು? ಎಂದು. ಮಗೂ! ಈ ಜನ್ಮದಲ್ಲಿ ನೀನು ಪ್ರಯತ್ನ ಮಾಡಿದರೆ ಮರು ಜನ್ಮದಲ್ಲಿ ಶ್ರೀಮಂತ ಗೃಹದಲ್ಲಿ ಹುಟ್ಟುವೆ. ಇಲ್ಲದಿದ್ದರೆ ಯೋಗಿಗಳ ಗೃಹದಲ್ಲಿ ಹುಟ್ಟಿ ನಂತರ ಮಾಡಬೇಕಾದ ಸಾಧನೆಯನ್ನು ಪೂರ್ತಿ ಮಾಡಿ ಮೋಕ್ಷವನ್ನೇ ಹೊಂದುವೆ ಎಂದನು. ಆದ್ದರಿಂದ ಯಾರಾದರೆ ದೀಕ್ಷೆಯಿಂದ ಮಾಡುತ್ತಾರೋ, ಅವರು ಈ ಜನ್ಮವನ್ನೇ ಕೊನೆಯ ಜನ್ಮವಾಗಿ ಮಾಡಿಕೊಳ್ಳುತ್ತಾರೆ. ಇಲ್ಲದಿದ್ದರೆ ನಂತರ ಬರುವ ಜನ್ಮವಾದರೂ ಕೊನೆಯ ಜನ್ಮವಾಗುತ್ತದೆ.

# ತಪ್ಪನ್ನು ಹಿಡಿಯುವುದು ಎಲ್ಲದಕ್ಕಿಂತಲೂ ದೊಡ್ಡ ತಪ್ಪು

ಪತ್ರೀಜಿಯವರು ಏನು ಹೇಳಿದ್ದಾರೆ ಎಂದರೆ "ತಪ್ಪನ್ನು ಹಿಡಿಯುವುದು ಎಲ್ಲದಕ್ಕಿಂತಲೂ ದೊಡ್ಡ ತಪ್ಪು" ಎಂದಿದ್ದಾರೆ. ಇಲ್ಲಿ ನೋಡಿದರೆ ಇದು ಒಂದು ಸಣ್ಣ ವಾಕ್ಯದಂತೆ ಅನಿಸುತ್ತದೆ. ಇದರಲ್ಲಿ ಅಪಾರವಾದ ಅರ್ಥ ಅಡಗಿದೆ. ಇದನ್ನು ಅರ್ಥ ಮಾಡಿಕೊಂಡು ಆಚರಿಸಿದವನು ಶ್ರೇಷ್ಠನಾಗುತ್ತಾನೆ. ಅರ್ಥಮಾಡಿಕೊಳ್ಳದೇ, ಆಚರಿಸದೇ ಹೋದರೆ ಎಷ್ಟೋ ನಷ್ಟ ಹೊಂದುತ್ತಾನೆ.

ಅದಕ್ಕೆ ಪತ್ರೀಜಿಯವರು ಯಾರನ್ನೂ ವಿಮರ್ಶಿಸಬೇಡ ಎನ್ನುತ್ತಾರೆ. ವಿಮರ್ಶೆ ಎಂದರೆ ಇತರರಲ್ಲಿ ಲೋಪವನ್ನು ಎತ್ತಿ ತೋರಿಸುವುದು **'ನೋ ಕಾಮೆಂಟ್, ನೋ ಜಡ್ಜ್‌ಮೆಂಟ್'** ಎಂದಿದ್ದಾರೆ. ಯಾರನ್ನೂ ವಿಮರ್ಶಿಸಬೇಡ, ಯಾರ ಬಗ್ಗೆಯೂ ನಿರ್ಣಯಗಳನ್ನು ಮಾಡಬೇಡವೆಂದು. ಈಗ ಈ ಸಂದೇಶಕ್ಕೆ ಅದಕ್ಕೆ ಸ್ವಲ್ಪ ಹತ್ತಿರದ ಸಂಬಂಧವಿದೆ. ಆದ್ದರಿಂದ ಇದನ್ನು ತಿಳಿದುಕೊಳ್ಳೋಣ.

ಪ್ರಪಂಚದಲ್ಲಿ ಅನೇಕ ತರಹದ ಮನುಷ್ಯರಿದ್ದಾರೆ. ಪೂರ್ಣಾತ್ಮನಿಂದ ಬಿಡುಗಡೆಯಾದಂತಹ ಅಂಶಾತ್ಮಗಳಾದ ನಾವು ಮೊಟ್ಟಮೊದಲನೆಯದಾಗಿ ಮಾನವ ಶರೀರದಲ್ಲಿ ಪ್ರವೇಶಿಸುತ್ತೇವೆ. ಹಾಗೆ ಮಾನವ ಶರೀರದಲ್ಲಿ ಪ್ರವೇಶಿಸಿ 100 ಜನ್ಮಗಳನ್ನು ತೆಗೆದುಕೊಂಡವರಿದ್ದಾರೆ, 200 ಜನ್ಮಗಳನ್ನು ತೆಗೆದುಕೊಂಡವರಿದ್ದಾರೆ, 300 ಜನ್ಮಗಳನ್ನು ಕೂಡ ತೆಗೆದುಕೊಂಡವರು ಇದ್ದಾರೆ. ಆದರೆ, ಇವರೆಲ್ಲರ ಸ್ವಭಾವಗಳು ಒಂದೇ ರೀತಿಯಾಗಿ ಇರುವುದಿಲ್ಲ.

ಮೊಟ್ಟ ಮೊದಲನೇ ಜನ್ಮಗಳಲ್ಲಿ ಅಂದರೆ ಪ್ರಾರಂಭ ಜನ್ಮಗಳಲ್ಲಿ ತಮೋಗುಣ ಪ್ರಧಾನವಾಗಿ ಬರುತ್ತಾ, ಹಾಗೆ ಕೆಲವು ಜನ್ಮಗಳನ್ನು ತೆಗೆದುಕೊಂಡ ನಂತರ ನಿಧಾನವಾಗಿ ಆ ಗುಣವು ಬದಲಾಗುತ್ತಾ ರಜೋಗುಣ ಪ್ರಧಾನವಾಗಿ ತಯಾರಾಗುತ್ತಾನೆ. ಆನಂತರ ಇನ್ನೂ ಬದಲಾಗುತ್ತ ಸತ್ವ ಗುಣ ಪ್ರಧಾನವಾಗಿ ಬಿಡುತ್ತಾನೆ. ಆನಂತರ ನಿರ್ಗುಣನಾಗಿಬಿಡುತ್ತಾನೆ.

ಅಂದರೆ ಮಾನವರು ತರತರದ ಗುಣಗಳಿಂದ, ನೋಡುವುದಕ್ಕೆ ಎಲ್ಲರೂ ಮಾನವರಂತೆಯೇ ಇರುತ್ತಾರೆ. ಎಲ್ಲರಿಗೂ ಒಂದೇ ರೀತಿಯಾದ ಅವಯವಗಳಿರುತ್ತವೆ. ಆದರೆ, ಅವರು ಮಾಡುವ ಕೆಲಸಗಳು, ಆಲೋಚನೆಗಳು ಎಲ್ಲ ಒಂದೇ ರೀತಿಯಾಗಿ ಇರುವುದಿಲ್ಲ.

ಒಬ್ಬನು ಸೇವೆಗಳನ್ನು ಮಾಡುತ್ತಾನೆ. ಮತ್ತೊಬ್ಬನು ಹತ್ಯೆಗಳನ್ನು ಮಾಡುತ್ತಾನೆ. ಒಬ್ಬನು ಚೆನ್ನಾಗಿ ಸಂಪಾದಿಸುತ್ತಾನೆ, ಮತ್ತೊಬ್ಬನು ಇರುವುದನ್ನು ಕಳೆದುಕೊಳ್ಳುತ್ತಾನೆ. ಒಬ್ಬನು

ಹೆಂಡತಿಯನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಾನೆ, ಮತ್ತೊಬ್ಬನು ಹೆಂಡತಿಗೆ ನರಕವನ್ನು ತೋರಿಸುತ್ತಾನೆ. ಕೆಲವರು ಜೀವಿಗಳನ್ನು ಹಿಂಸಿಸುತ್ತಾರೆ, ಇನ್ನು ಕೆಲವರು ಆ ಜೀವಿಗಳನ್ನೇ ಪ್ರೀತಿಸುತ್ತಾರೆ. ಒಬ್ಬನು ಸೇವೆಗಳನ್ನು ಮಾಡುತ್ತಾನೆ, ಮತ್ತೊಬ್ಬನು ಮೋಸಗಳನ್ನು ಮಾಡಿ ಇತರರನ್ನು ದೋಚುತ್ತಾನೆ.

ಹೀಗೆ ವಿವಿಧ ಗುಣಗಳಿಂದ ಕೂಡಿರುವ ಮಾನವರು ಮಾಡುವ ಬಾಹ್ಯ ಕಾರ್ಯ ಕಲಾಪಗಳು ಕೂಡ ಒಂದೇ ರೀತಿಯಲ್ಲಿ ಇರುವುದಿಲ್ಲ. ಆ ಗುಣಗಳಿಗೆ ತಕ್ಕಂತೆ ಅನೇಕ ವಿಧಗಳಲ್ಲಿರುತ್ತವೆ. ಒಬ್ಬರು ಮಾಡುವ ಕೆಲಸಗಳು ಮತ್ತೊಬ್ಬರೊಂದಿಗೆ ಏಕವಾಗಲಾರವು.

ಬಹಳ ಜನ ಸ್ತ್ರೀಯರು ಈ ಧ್ಯಾನ ಮಾರ್ಗದಲ್ಲಿ ಬಂದು ಮಾಂಸವನ್ನು ಬಿಡುವುದು, ದಿನವೂ ಕುಳಿತು ಧ್ಯಾನ ಮಾಡುತ್ತಾ ಇರುತ್ತಾರೆ. ಆದರೆ, ಅವರ ಗಂಡಂದಿರಿಗೆ ಇದು ಇಷ್ಟವಾಗದು. ಅವರನ್ನು ಬೈಯುತ್ತಾ ನಿರುತ್ಸಾಹ ಪಡಿಸುತ್ತಾ ಇರುತ್ತಾರೆ 'ನಿಜವಾಗಿಯೂ ನೀನು ಏಕೆ ಬಂದಿರುವೆ? ಸನ್ಯಾಸಿಗಳಲ್ಲಿ ಬೆರೆತು ಹೋಗಲು ಬಂದಿರುವೆಯೋ? ಎಂದು ಅನೇಕ ವಿಧದಲ್ಲಿ ಬೈಯುತ್ತಿರುತ್ತಾರೆ. ಪಾಪ! ಇವರು ಬಾಧೆ ಪಡುತ್ತಿರುತ್ತಾರೆ. ಆತನು ಕೂಡ ಬದಲಾಗಿ ಬಿಟ್ಟರೆ ಚೆನ್ನಾಗಿರುತ್ತದೆ ಎಂದುಕೊಳ್ಳುತ್ತಾರೆ. ಆದರೆ, ಇವರು ಮಾಡಿದಂತೆ ಅವರ ಕೆಲಸಗಳು ಇರುವುದಿಲ್ಲ.

ಮತ್ತೆ ಇದಕ್ಕೆ ಕಾರಣ ಒಬ್ಬೊಬ್ಬರು ಒಂದೊಂದು ಗುಣವನ್ನು ಹೊಂದಿರುವುದೇ ಇದಕ್ಕೆ ಕಾರಣ. ಆದ್ದರಿಂದ ಒಬ್ಬರ ಕೆಲಸ ಇನ್ನೊಬ್ಬರ ಕೆಲಸಗಳಿಗೆ ಸಂಬಂಧವಿರುವುದಿಲ್ಲ. ಪ್ರಾರಂಭದ ಜನ್ಮಗಳಲ್ಲಿ ಇರುವವನು ತಮೋಗುಣ ಪ್ರಧಾನವಾಗಿರುತ್ತಾನೆ. ಅಂಥವನ ವರ್ತನೆ, ಕಾರ್ಯಕ್ರಮಗಳು ಆ ಗುಣಕ್ಕೆ ಸಂಬಂಧಿಸಿದವುಗಳಾಗಿಯೇ ಇರುತ್ತವೆ. ಆ ಗುಣಕ್ಕೆ ಅಂಕಿತವಾಗಿ ಆ ಗುಣಕ್ಕೆ ಪ್ರತಿರೂಪವಾಗಿ ಆ ಗುಣಕ್ಕೆ ನೆರಳಾಗಿರುತ್ತವೆ. ಹಾಗೆಯೇ ಮಧ್ಯಸ್ಥ ಜನ್ಮಗಳೊಳಗೆ ಬಂದರೆ ರಜೋಗುಣದಲ್ಲಿರುತ್ತಾನೆ. ಹಾಗೆ ರಜೋಗುಣ ಪ್ರಧಾನವಾದ ಕಾರ್ಯಕಲಾಪಗಳು ಬೇರೆ ವಿಧವಾಗಿ ಇರುತ್ತವೆ.

ತುಂಬಾ ಜನರು ನನ್ನ ಗಂಡ ಬದಲಾಗಬೇಕು, ನನ್ನ ಹೆಂಡತಿ ಬದಲಾಗಬೇಕು, ನನ್ನ ಮಕ್ಕಳು ಬದಲಾಗಬೇಕು ನನ್ನ ಮಾರ್ಗದೊಳಗೆ ತಂದುಕೊಳ್ಳಬೇಕು ಎಂದುಕೊಳ್ಳುತ್ತಾರೆ. ಆದರೆ, ಗುಣಗಳು ಒಂದೇ ರೀತಿಯಲ್ಲಿ ಇಲ್ಲದಿದ್ದರೆ ಅದು ಅಸಂಭವ ಅಸಾಧ್ಯ.

ಅದನ್ನೇ ಪತ್ರೀಜಿಯವರು ಹೇಳುತ್ತಿದ್ದಾರೆ. ಎಲ್ಲರ ಕೆಲಸಗಳು ಒಂದೇ ರೀತಿಯಾಗಿ ಹೇಗೆ ಇರುತ್ತವೆ? ಎನ್ನುತ್ತಾರೆ. ನೀನು ಯಾವ ಅಡುಗೆಯನ್ನು ಮಾಡಿಕೊಂಡು ಉಂಡರೆ ಕೈ ಆ ವಾಸನೆ ಬರುತ್ತದೆ. ಟೊಮ್ಯಾಟೋ ಅಡುಗೆಯನ್ನು ಮಾಡಿಕೊಂಡರೆ ಕೈ ಟೊಮ್ಯಾಟೋ ವಾಸನೆ ಬರುತ್ತದೆ. ಟೊಮ್ಯಾಟೋ ಅಡುಗೆ ಮಾಡಿಕೊಂಡು ಉಂಡರೆ ಹಾಗಲಕಾಯಿ ವಾಸನೆ ಬಾರದು. ಹಾಗೆಯೇ ಅವರ ಗುಣಗಳನ್ನು ಆಧರಿಸಿಯೇ

ಅವರ ಕೆಲಸಗಳು ಇರುತ್ತವೆ. ಅದಕ್ಕೆ ಎಲ್ಲರ ಕೆಲಸಗಳು ಒಂದೇ ರೀತಿಯಾಗಿ ಇರುವುದು ಅಸಂಭವ ಎಂದಿದ್ದಾರೆ.

ಹಾಗೆಯೇ ಒಬ್ಬ ರಜೋಗುಣ ಪ್ರಧಾನವಾದವನ ಕಾರ್ಯಕಲಾಪಗಳು ಒಬ್ಬ ಸತ್ವಗುಣ ಪ್ರಧಾನವುಳ್ಳವನ ಕಾರ್ಯಕಲಾಪಗಳು ಒಂದೇ ರೀತಿಯಾಗಿರಲು ಸಾಧ್ಯವಿಲ್ಲ. ರಜೋಗುಣ ಪ್ರಧಾನವುಳ್ಳವನು ರಾಜಕೀಯಗಳಲ್ಲಿರುತ್ತಾನೆ. ಅದೇ ಸತ್ವಗುಣ ಪ್ರಧಾನವಾದರೆ ಒಳ್ಳೆಯ ಸಂಗೀತವನ್ನು ಕೇಳುತ್ತಾನೆ. ಉತ್ತಮವಾಗಿ ಭಜನೆಗಳನ್ನು ಮಾಡುತ್ತಾನೆ. ಇಲ್ಲದಿದ್ದರೆ ಚೆನ್ನಾಗಿ ಆಟ ಪಾಠಗಳಲ್ಲಿ ಇರುತ್ತಾನೆ. ಅವನಿಗೆ ಅದೇ ಬೇಕು.

ಹಾಗೆಯೇ ಒಬ್ಬ ಸಾತ್ವಿಕ ಗುಣ ಪ್ರಧಾನವುಳ್ಳವನ ಕಾರ್ಯಕಲಾಪಗಳು, ಒಬ್ಬ ನಿರ್ಗುಣಿಯ ಕಾರ್ಯಕಲಾಪಗಳು ಒಂದೇ ರೀತಿಯಲ್ಲಿ ಇರುವುದಿಲ್ಲ. ನಿರ್ಗುಣ ಪ್ರಧಾನವಾಗಿರುವವನು ಯಾವಾಗಲೂ ಧ್ಯಾನವನ್ನು ಮಾಡುತ್ತಾ ಇರುತ್ತಾನೆ. ಧ್ಯಾನದ ಕುರಿತೇ ಮಾತನಾಡುತ್ತಿರುತ್ತಾನೆ. ಈ ರೀತಿ ನಿಮ್ಮ ವರ್ತನೆ ಇದ್ದರೆ ನೀವು ಸಾತ್ವಿಕ ಗುಣದಿಂದ ನಿರ್ಗುಣದೊಳಗೆ ಬರುತ್ತಿದ್ದೀರಿ ಎಂದು ಲೆಕ್ಕ.

ಅದಕ್ಕೆ ನಾನು ನೀವೆಲ್ಲರೂ 350 ಜನ್ಮಗಳನ್ನು ದಾಟಿ, ಕೊನೆಯ ಜನ್ಮಗಳೊಳಗೆ ಬಂದವರು ಎಂದು ಹೇಳುತ್ತಾ ಇರುತ್ತೇನೆ. ಕಾರಣ ಮಾನವನ ಬಾಹ್ಯ ಕಾರ್ಯಕಲಾಪಗಳು, ಕ್ಷೇತ್ರಗಳು, ಕುರುಕ್ಷೇತ್ರಗಳು ಅವರವರ ಅಂತರ್ಗುಣಗಳ ಬಂಧಿಗಳು. ಅವರು ನಿಸ್ಸಹಾಯಕರು, ಅವರನ್ನು ವಿಮರ್ಷಿಸಿದರೂ ತಪ್ಪು ಹಿಡಿದರೂ, ಅವರೇನೂ ಮಾಡಲಾರರು. ಅವರು ಆ ಗುಣಗಳಿಗೆ ಬಂಧಿಗಳು. ಆದ್ದರಿಂದ ಅವರ ಬಾಹ್ಯ ಕಾರ್ಯಗಳು ಕೂಡ ಎರಕ ಹೊಯ್ದಂತೆ ಹಾಗೆಯೇ ಇರುತ್ತವೆ. ಆದ್ದರಿಂದ ನಿಮ್ಮ ಕಾರ್ಯಕಲಾಪಗಳು ನಿಮ್ಮ ಸ್ವಧರ್ಮವೊಂದರ ಅಚ್ಚು ಒತ್ತಿದ ನೆರಳುಗಳು.

ಆದಕಾರಣ ನಿಮ್ಮ ಗುಣ ಒಂದು ರೀತಿಯಲ್ಲಿ, ನೀವು ಮಾಡುವ ಕೆಲಸಗಳು ಒಂದು ರೀತಿಯಲ್ಲಿ ಇರುವುದು ಅಸಾಧ್ಯ ಅಸಂಭವ. ಅಷ್ಟೇ ಅಲ್ಲ ಈ ಗುಣವೆನ್ನುವುದು ಅಷ್ಟು ಬೇಗನೆ ಬದಲಾಗುವುದಿಲ್ಲ. ನಿಧಾನವಾಗಿ ಬದಲಾಗುತ್ತಿರುತ್ತದೆ. ಅಂದರೆ ಜನ್ಮಗಳೇ ಹಿಡಿಯುತ್ತವೆ. ಆದರೆ, ಹಾಗೆಯೇ ಗುಣವು ಬದಲಾಗಬೇಕೆಂದರೆ ಅಷ್ಟು ಜನ್ಮಗಳನ್ನು ತೆಗೆದುಕೊಳ್ಳುವ ಬದಲು 'ಶ್ವಾಸದ ಮೇಲೆ ಗಮನ' ಧ್ಯಾನ ಮಾಡಿದರೆ ಈ ಜನ್ಮದಲ್ಲಿಯೇ ಬದಲಾಗುತ್ತದೆ.

ಆದ್ದರಿಂದ ಯಾರ ಕಾರ್ಯಕಲಾಪಗಳನ್ನೂ ನಿಂದಿಸಬಾರದು. ಅವರು ಹಾಗೆಯೇ ವರ್ತಿಸುತ್ತಾರೆ. ಏಕೆಂದರೆ ನಡೆಯುವುದನ್ನು ಕಲಿಯುತ್ತಿರುವಂತಹ ಮಗು ಹೇಗೆ

ನಡೆಯುತ್ತದೆಯೋ ಹಾಗೆಯೇ ಪ್ರಾರಂಭ ಜನ್ಮಗಳಲ್ಲಿರುವ ಆತ್ಮವೂ ಹಾಗೆಯೇ ವರ್ತಿಸುತ್ತಾ ಇರುತ್ತದೆ. ಅವನು ಕೆಲವು ಜನ್ಮಗಳನ್ನೇ ಎತ್ತಿರುವವನು, ನೀನು ಅಂದುಕೊಂಡಂತೆ ಹೇಗೆ ವರ್ತಿಸುತ್ತಾನೆ?

ಆದ್ದರಿಂದ ಐದು ಜನ್ಮಗಳಿಗೆ ಯಾವ ಯಾವ ಸ್ವಭಾವಗಳು ಇರುತ್ತವೆಯೋ ಅವೇ ಇರುತ್ತವೆ. 50 ಜನ್ಮಗಳಿಗೆ ಯಾವ ಯಾವ ಗುಣಗಳು ಇರುತ್ತವೆಯೋ ಅವೇ ಇರುತ್ತವೆ. ಹಾಗೆಯೇ 300 ಜನ್ಮಗಳನ್ನು ತೆಗೆದುಕೊಂಡವನು ಯಾವ ಕೆಲಸಗಳನ್ನು ಮಾಡಬೇಕೋ ಆ ಕೆಲಸಗಳನ್ನೇ ಮಾಡುತ್ತಾನೆ. ಅಂದರೆ ಪ್ರಕೃತಿಯಲ್ಲಿ ಇರುವಂತಹ ಗುಣಗಳನ್ನು ಅನುಸರಿಸಿ ಅವನು ವರ್ತಿಸುತ್ತಾ ಇರುತ್ತಾನೆ. ಆದ್ದರಿಂದ ತಪ್ಪೆನ್ನುವುದು ಎಲ್ಲಿದೆ? ತಪ್ಪೆನ್ನುವುದು ಇಲ್ಲವೇ ಇಲ್ಲ. ಅದಕ್ಕೆ ತಪ್ಪನ್ನು ಹಿಡಿಯುವುದು ಎಂಬುದು ಎಲ್ಲದಕ್ಕಿಂತಲೂ ದೊಡ್ಡ ತಪ್ಪು.

ಆದ್ದರಿಂದ ಪ್ರತಿ ಮಾನವನು ಕೆಲವು ಜನ್ಮಗಳಲ್ಲಿ ತಮೋಗುಣಿಯಾಗಿ ವರ್ತಿಸುತ್ತಾನೆ, ಮತ್ತೆ ಕೆಲವು ಜನ್ಮಗಳು ರಜೋಗುಣದಿಂದ ಇರುತ್ತಾನೆ. ಮತ್ತೆ ಕೆಲವು ಜನ್ಮಗಳನ್ನು ಸತ್ವಗುಣಿಯಾಗಿದ್ದು ಕೊನೆಗೆ ಯಾವ ಮಾನವನಾದರೂ ಸರಿ ನಿರ್ಗುಣಿಯಾಗಿಯೇ ತೀರುತ್ತಾನೆ. ಆದಕಾರಣ ಯಾರನ್ನೂ ತಪ್ಪು ಹಿಡಿಯುವ ಕೆಲಸವಿಲ್ಲವೆಂದು ಪತ್ರೀಜಿಯವರು ಅದ್ಭುತವಾಗಿ ಹೇಳಿದ್ದಾರೆ.

ಪತ್ರೀಜಿಯವರು ಇನ್ನೂ ಏನು ಹೇಳಿದ್ದಾರೆ ಎಂದರೆ, 'ಜಡ್ಜ್ ಎನಾಟ್' ಎಂದು ಜೀಸಸ್ ಕ್ರಿಸ್ತನು ಹೇಳಿದ್ದಾನೆ ಎಂದು ಹೇಳಿದ್ದಾರೆ. ಒಬ್ಬ ವೇಶ್ಯೆಯನ್ನು ಕಲ್ಲುಗಳಿಂದ ಹೊಡೆಯುತ್ತಿದ್ದರೆ ಆತನು ಏನು ಹೇಳಿದನೆಂದರೆ, ನಿಮ್ಮಲ್ಲಿ ತಪ್ಪು ಮಾಡದವರು ಯಾರಾದರೂ ಇದ್ದರೆ ಅವರು ಮಾತ್ರವೇ ಕಲ್ಲುಗಳಿಂದ ಹೊಡೆಯಿರಿ ಎಂದನು. ಆಗ ಎಲ್ಲರೂ ಕಲ್ಲುಗಳನ್ನು ಕೆಳಗೆ ಹಾಕಿದರು.

ಆದ್ದರಿಂದ ಯಾರ ಸ್ಥಾಯಿಯಲ್ಲಿ ಅವರು ತಪ್ಪುಗಳನ್ನು ಮಾಡುತ್ತಿರುತ್ತಾರೆ, ಒಪ್ಪುಗಳನ್ನು ಮಾಡುತ್ತಿರುತ್ತಾರೆ. ಆದ್ದರಿಂದ ಯಾರನ್ನೂ ತಪ್ಪು ಹಿಡಿಯುವ ಸಮರ್ಥತೆ ಇಲ್ಲದವರು ನಾವು. ಆದಕಾರಣ ಯಾರನ್ನೂ ವಿಮರ್ಷಿಸಬಾರದು. ವಿಮರ್ಷಿಸುವುದು ದೊಡ್ಡ ತಪ್ಪು. ನಿನಗಿಂತ ಹೆಚ್ಚು ಗುಣ ಸ್ಥಿತಿಯಲ್ಲಿ ಇರುವವರು ಮಾಡುವ ಕೆಲಸಗಳು ನಿನಗೆ ತಪ್ಪಾಗಿಯೇ ಕಾಣಿಸುತ್ತವೆ. ಹಾಗೆಯೇ ನಿನಗಿಂತ ಕಡಿಮೆ ಗುಣಸ್ಥಿತಿಯಲ್ಲಿ ಇರುವವರು ಮಾಡುವ ಕೆಲಸಗಳು ಕೂಡ ನಿನಗೆ ತಪ್ಪಾಗಿ ಕಾಣಿಸುತ್ತವೆ. ಆದ್ದರಿಂದ ಯಾರ ಚೇಷ್ಟೆಗಳನ್ನೂ ನಿಂದಿಸಬಾರದು.

ಅವನು ತಪ್ಪು ಮಾಡುತ್ತಿದ್ದಾನೆ ಎಂದರೆ ಅದಕ್ಕಿಂತಲೂ ದೊಡ್ಡ ತಪ್ಪು ನೀನು ಮಾಡುತ್ತಿರುವೆ. ಇದು ಸೃಷ್ಟಿಯಲ್ಲಿರುವ ನಿಯಮ. ಸೃಷ್ಟಿ ನಿಯಮಗಳಿಗೆ

ವಿರುದ್ಧವಾಗಿ ನೀನು ಆ ಕೆಲಸ ಮಾಡಿದರೆ ನೀನು ಇನ್ನೂ ದೊಡ್ಡ ಪಾಪವನ್ನು ಮಾಡಿದಂತೆ. ಅವನು ಪಾಪ ಮಾಡುತ್ತಿದ್ದಾನೆ ಎಂದು ನೀನು ಅಂದುಕೊಳ್ಳುತ್ತಿರುವೆ ಅಂದರೆ ನೀನು ಇನ್ನೂ ದೊಡ್ಡ ಪಾಪವನ್ನು ಮಾಡುತ್ತಿರುವೆ. ನಮ್ಮ ಸೊಸೈಟಿಯಲ್ಲಿ ಕೆಲವರು ಇದ್ದಾರೆ. ಅವರು ಎಷ್ಟು ಹೊತ್ತೂ ಫೇಸ್‌ಬುಕ್‌ನಲ್ಲಿ, ವಾಟ್ಸ್‌ಆ್ಯಪ್‌ನಲ್ಲಿ ಹಾಗೆ ವಿಡಿಯೋಗಳನ್ನು ನೋಡುತ್ತಾ ವಿಮರ್ಷಿಸುತ್ತಾ ಇರುತ್ತಾರೆ. ಪತ್ರೀಜಿಯವರು ಹೇಳಿದಂತೆ ಮಾಡುತ್ತಿಲ್ಲವೆಂದು ವಿಮರ್ಶಿಸುತ್ತಾರೆ. ಈಗ ಪತ್ರೀಜಿಯವರು **"ನೋ ಕಾಮೆಂಟ್, ನೋ ಜಡ್ಜ್‌ಮೆಂಟ್"** ಎಂದು ಹೇಳಿಲ್ಲವೇ? ಮತ್ತು ಅವನು ತಪ್ಪು ಮಾಡುತ್ತಿಲ್ಲವೇ? ಇನ್ನೂ ದೊಡ್ಡ ತಪ್ಪನ್ನು ಮಾಡುತ್ತಿದ್ದಂತೆಯೇ.

ಆದ್ದರಿಂದ ಈ ವಿಮರ್ಶಿಸುವವರು, ಎದುರಿಗೆ ಇರುವವರ ತಪ್ಪುಗಳನ್ನು ಹಿಡಿಯುವವರು  ಅವರೇ ನಷ್ಟ ಹೋಗುತ್ತಾರೆ ಎಂಬ ವಿಷಯವನ್ನು ತಿಳಿದುಕೊಳ್ಳಬೇಕು.

---

## ಮನಸ್ಸನ್ನು ಶುದ್ಧಿ ಮಾಡಿಕೊಂಡರೆ...



- ಕೇಡು ತೊಲಗುತ್ತದೆ.
- ಉತ್ತಮವಾದ ಕೆಲಸಗಳನ್ನು ಮಾಡುತ್ತಾರೆ.
- ಆನಂದದಿಂದ ಜೀವಿಸುತ್ತಾರೆ.
- ಬುದ್ಧಿ ವಿಕಸಿಸುತ್ತದೆ. ನೈಪುಣ್ಯ ಬರುತ್ತದೆ.
- ಬುದ್ಧಿವಂತಿಕೆ ವೃದ್ಧಿಸುತ್ತದೆ.
- ನೆನಪಿನ ಶಕ್ತಿ ವೃದ್ಧಿಸುತ್ತದೆ
- ಅದ್ಭುತವಾದ ವ್ಯಕ್ತಿತ್ವ ರೂಪಿಸುತ್ತದೆ.
- ಗ್ರಹಣ ಶಕ್ತಿ ವೃದ್ಧಿಸುತ್ತದೆ.
- ಸಲಹೆಗಳ ಮೇಲೆ ಅವಲಂಬಿತರಾಗುವುದಿಲ್ಲ.
- ಬುದ್ಧಿಯು ಸರಿಯಾದ ನಿರ್ಣಯಗಳನ್ನು ತೆಗೆದುಕೊಳ್ಳುತ್ತದೆ.
- ವಿವೇಕ ಉಳ್ಳವರಾಗಿರುತ್ತಾರೆ.
- ಕೆಲಸಗಳು, ಮಾತುಗಳು, ಆಲೋಚನೆಗಳು ಲಾಭದಾಯಕವಾಗುತ್ತವೆ.
- ಧರ್ಮವನ್ನು ಆಚರಿಸುತ್ತಾರೆ. ಧರ್ಮದಿಂದ ಜೀವಿಸುತ್ತಾರೆ.
- ಧರ್ಮದಿಂದ ರಕ್ಷಿಸಲ್ಪಡುತ್ತಾರೆ.

**– ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್**

# ಚಂದ್ರವಂಶೀಕರು, ಸೂರ್ಯವಂಶೀಕರು

**ಜ್ಞಾನವೆನ್ನುವುದು ಎರಡು ವಿಧಗಳು.**

1) ಪರೋಕ್ಷ ಜ್ಞಾನ 2) ಅಪರೋಕ್ಷ ಜ್ಞಾನ

ಇಲ್ಲಿ ಪರೋಕ್ಷ ಜ್ಞಾನವೆಂದರೆ ಇತರರಿಂದ ಹೊಂದುವ ಜ್ಞಾನ. ಇತರರು ಹೇಳಿದ ಅನುಭವಗಳ ಮೂಲಕ ನೀವು ಹೊಂದುವ ಜ್ಞಾನ. ಪರರ ಜ್ಞಾನ ಪ್ರಕಾಶದ ಮೂಲಕ ನೀವು ಹೊಂದುವ ಜ್ಞಾನ ಪರೋಕ್ಷ ಜ್ಞಾನ.

ಅಪರೋಕ್ಷ ಜ್ಞಾನವೆಂದರೆ ಸ್ವಯಂ ಅನುಭವಗಳ ಮೂಲಕ ಹೊಂದುವ ಜ್ಞಾನ. ಸ್ವಯಂ ಪ್ರಕಾಶದ ಮೂಲಕ ಹೊಂದುವ ಜ್ಞಾನ. ಈ ಸ್ವಯಂ ಪ್ರಕಾಶದ ಮೂಲಕ ಸ್ವ ಅನುಭವದ ಮೂಲಕ ಜ್ಞಾನವು ಹೇಗೆ ಬರುತ್ತದೆ ಅಂದರೆ ನೀವು ವಿಶೇಷವಾದ ಧ್ಯಾನಸಾಧನೆ ಮಾಡಿದರೆ, ಭೀವವರಂನ ತರಗತಿಗಳಲ್ಲಿ ನಿರಂತರವಾಗಿ ಪಾಲ್ಗೊಳ್ಳುತ್ತಾ, ಅಲ್ಲಿ ನಡೆಯುವ ಗಂಟೆಗಟ್ಟಲೆ ಧ್ಯಾನದಲ್ಲಿ ಆಲೋಚನ ರಹಿತ ಸ್ಥಿತಿಯಲ್ಲಿ ಇದ್ದರೆ ನಿಧಾನವಾಗಿ ನಿಮಗೆ ನಿಮ್ಮ ಶರೀರದಲ್ಲಿ ಇರುವಂತಹ ಆತ್ಮನಿಂದ ಅನಂತವಾದ ಜ್ಞಾನವು ಲಭಿಸುತ್ತಾ ಇರುತ್ತದೆ.

ಆಗ ಇತರರು ಹೇಳಿದ್ದನ್ನು ನೀವು ಹೇಳಬೇಕಾದ ಕೆಲಸವೇನೂ ಇಲ್ಲ. ಅಲ್ಲಿ ನೀವು ಸುಮ್ಮನೆ ಒಂದು ವಿಷಯ ತೆಗೆದುಕೊಳ್ಳುತ್ತೀರಾಗಲಿ ಅಲ್ಲಿಂದ ನಿಮಗೆ ಅಂತರ್ಲೀನವಾಗಿ ಲಭಿಸುತ್ತ ಇರುತ್ತದೆ. ಅದನ್ನೇ ನೀವು ಹೇಳುತ್ತಾ ಇರುತ್ತೀರಿ. ಇದೆ ಅಪರೋಕ್ಷ ಜ್ಞಾನ. ಈ ರೀತಿಯಾಗಿ ನೀವು ಒದಗುತ್ತಿರುವುದರಿಂದ, ಬೋಧಿಸುತ್ತಾ ಇದ್ದರೆ ನೀವು ಅಪರೋಕ್ಷ ಜ್ಞಾನವನ್ನು ಬೋಧಿಸುತ್ತಿರುವಂತೆ ಲೆಕ್ಕ. ಯಾವಾಗಾದರು ನೀವು ನಿಮ್ಮ ಆತ್ಮದ ಮೂಲಕ ಲಭಿಸುತ್ತಿರುವುದನ್ನು ಬೋಧಿಸುತ್ತಿರೋ ಬಹಳ ಉತ್ತಮವಾಗಿ ಇತರರಿಗೆ ಗೊಂದಲವಿಲ್ಲದಂತೆ ಹೇಳಬಲ್ಲವರಾಗುತ್ತೀರಿ.

ಈ ಅಪರೋಕ್ಷ ಜ್ಞಾನವು ನಿಮಗೆ ಸಿಗದಿದ್ದರೆ ಇತರರದ್ದನ್ನು ನೀವು ಹೇಳುತ್ತಿರುತ್ತೀರಿ. ನೀವು ಸ್ವಂತವಾಗಿ ಹೇಳಬೇಕೆಂದರೂ ಅಪರೋಕ್ಷ ಜ್ಞಾನವು ಲಭಿಸದಿದ್ದರೆ ಏನೋ ಒಂದನ್ನು ಹೇಳುತ್ತೀರಿ.

ನೀವು ಎರಡು ಅಂಶಗಳನ್ನು ತೆಗೆದುಕೊಂಡು ಎರಡು ಗಂಟೆಗಳು ಪರಿಪೂರ್ಣವಾಗಿ ಬೋಧಿಸಿದರೆ, ನಿಮಗೆ ಅಪರೋಕ್ಷ ಜ್ಞಾನ ಪಡೆಯುತ್ತಿರುವಂತೆ ಲೆಕ್ಕ. ನೀವು ಉತ್ತಮ ಬೋಧಕರಾಗುತ್ತೀರಿ ಹೇಳುವುದು ಮುಖ್ಯವಲ್ಲ. ಕಂಠಪಾಠ ಮಾಡಿ ಹೇಳುವುದಕ್ಕೂ ಸ್ವಯಂ ಅನುಭವಗಳ ಮೂಲಕ ಹೇಳುವುದಕ್ಕೂ ಬಹಳ ವ್ಯತ್ಯಾಸವಿರುತ್ತದೆ. ಈ ಸ್ವಯಂಪ್ರಕಾಶದ ಮೂಲಕ ಹೊಂದುವ ಜ್ಞಾನವನ್ನು

ಸ್ವಯಂ ಅಂದರೆ ಆತ್ಮಪ್ರಕಾಶದ ಮೂಲಕ ಹೊಂದುವ ಜ್ಞಾನವನ್ನೇ ಅಪರೋಕ್ಷ ಜ್ಞಾನ ಎನ್ನುತ್ತಾರೆ.

ಆಧ್ಯಾತ್ಮಿಕವಾಗಿ ಬೆಳೆಯಬೇಕೆನ್ನುವವರು ಯಾರೇ ಆಗಲಿ ಮೊದಲು ಪರೋಕ್ಷ ಜ್ಞಾನದ ಮೇಲೆಯೇ ಆಧಾರಪಡುತ್ತಾರೆ ಅದು ಸಹಜ. ಆದರೆ, ಅವರ ತೀವ್ರ ಧ್ಯಾನ ಸಾಧನೆಯಿಂದ, ಛಲದಿಂದ, ಕೃಷಿಯಿಂದ ಅಪರೋಕ್ಷ ಜ್ಞಾನವನ್ನು ಕೂಡ ಹೊಂದಬಲ್ಲವರಾಗುತ್ತಾರೆ.

ಹೇಗೆ ಹೊಂದುತ್ತಾರೆ ಎಂದರೆ ಯಾರು "ಶ್ವಾಸದ ಮೇಲೆ ಗಮನ" ಧ್ಯಾನವನ್ನು ತೀವ್ರವಾಗಿ ಮಾಡುತ್ತಾರೋ ಅವರಿಗೆ ಮನಸ್ಸೊಂದರ ಪ್ರಾಮುಖ್ಯತೆ ಕಡಿಮೆಯಾಗುತ್ತಾ ಇರುತ್ತದೆ. ಮನಸ್ಸೊಂದರ ಪ್ರಾಮುಖ್ಯತೆಯು ಎಷ್ಟು ಕಡಿಮೆಯಾಗುತ್ತಾ ಇರುತ್ತದೆಯೋ ಅವರ ಶರೀರದಲ್ಲಿ ಆತ್ಮವೊಂದರ ಪ್ರಾಮುಖ್ಯತೆ ಅಷ್ಟು ಬೆಳೆಯುತ್ತಾ ಇರುತ್ತದೆ. ಹಾಗೆ ಹೆಚ್ಚಿದಾಗ ಆತ್ಮದಿಂದ ಅಪರೋಕ್ಷ ಜ್ಞಾನವನ್ನು ಹೊಂದಬಲ್ಲಿರಿ.

ಇಲ್ಲಿ ಈ ಎರಡಕ್ಕೂ ಪತ್ರೀಜಿಯವರು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಏನೆಂದರೆ ಚಂದ್ರನು ಸ್ವಯಂಪ್ರಕಾಶನಲ್ಲ. ಹುಣ್ಣಿಮೆ ದಿನ ಚಂದ್ರನ ಪ್ರಕಾಶವೂ ಎಷ್ಟೋ ರಮಣೀಯವಾಗಿರುತ್ತದೆ. ಆ ದಿನ ಅರ್ಧ ರಾತ್ರಿ ಹೊರಗೆ ಬಂದು ನೋಡಿದರೆ ಎಲ್ಲ ಕಾಣಿಸುತ್ತಲೇ ಇರುತ್ತವೆ. ಏಕೆ ಕಾಣಿಸುತ್ತವೆ? ಆ ಚಂದ್ರನ ಪ್ರಕಾಶ ಅಷ್ಟೊಂದು ಪ್ರಕಾಶಿಸುತ್ತಿದೆ ಎಂದರೆ, ಅದು ಆತನ ಪ್ರಕಾಶ ಅಲ್ಲ. ಸೂರ್ಯನ ಪ್ರಕಾಶದಿಂದಲೇ ಆತನಿಗೆ ಅಷ್ಟು ಪ್ರಕಾಶವಿರುತ್ತದೆ. ಮತ್ತೆ ಆ ಹುಣ್ಣಿಮೆಯ ಪ್ರಕಾಶವೂ ಯಾವಾಗಲೂ ಇರುತ್ತದೆಯೇ? ಅಂದರೆ ಇರುವುದಿಲ್ಲ ಕ್ಷೀಣವಾಗಿ ಅಮಾವಾಸ್ಯೆ ಬಂದು ಅಲ್ಲಿ ಪೂರ್ಣವಾಗಿ ಕತ್ತಲಾಗಿರುತ್ತದೆ. ನಿಜವಾಗಿಯೂ ಚಂದ್ರನಿಗೆ ಸ್ವಯಂ ಪ್ರಕಾಶವಿದ್ದರೆ ಸೂರ್ಯನಂತೆ ಯಾವಾಗಲೂ ಪ್ರಕಾಶಿಸುತ್ತಾ ಇರುತ್ತಾನೆ ಅಷ್ಟೇ ಹೊರತು, ಕೆಲವು ದಿನಗಳು ಪ್ರಕಾಶವಾಗಿ ಕೆಲವು ದಿನಗಳು ಪ್ರಕಾಶ ಹೀನವಾಗಿ ಕತ್ತಲಿನಿಂದ ಇರುವುದಿಲ್ಲ. ಅಂದರೆ ಚಂದ್ರನು ಆಗಾಗ ಮಾತ್ರವೇ ಪ್ರಕಾಶಿಸುವನು.

ಚಂದ್ರನಿಗೆ ಹುಣ್ಣಿಮೆ ಮತ್ತು ಚಂದ್ರ ಕಲೆಗಳಿವೆ. ಇಲ್ಲಿ ಚಂದ್ರಪ್ರಕಾಶದಿಂದ ಜೀವಿಸುವವನಿಗೆ ಒಮ್ಮೆ ಜೀವನ ಚೆನ್ನಾಗಿರುತ್ತದೆ, ಒಮ್ಮೆ ಜೀವನವು ಚೆನ್ನಾಗಿರುವುದಿಲ್ಲ. ಇವರನ್ನೇ ಚಂದ್ರವಂಶೀಕರೆಂದು ಪತ್ರೀಜಿಯವರು ನಿರ್ವಚನ ಕೊಟ್ಟಿದ್ದಾರೆ. ಇವರು ಜೀವನದಲ್ಲಿ ಧ್ಯಾನಾಭ್ಯಾಸವವನ್ನು ಇನ್ನೂ ಪ್ರಾರಂಭ ಮಾಡದೇ ಇರುವವರು. ಇನ್ನೂ ಪ್ರಾರಂಭ ಮಾಡಿಲ್ಲವೆಂದೇ ಹೇಳಬಹುದು.

ಇವರು ಪುಸ್ತಕಗಳನ್ನು ಚೆನ್ನಾಗಿ ಓದುತ್ತಾರೆ. ಹಾಗೆಯೇ ಸಂಜೆಯಲ್ಲಿ ಮೂವರು ನಾಲ್ವರು ಕುಳಿತು ಚರ್ಚೆ ಮಾಡುತ್ತಾರೆ. ನಾವು ಸಜ್ಜನ ಸಾಂಗತ್ಯ ಮಾಡುವುದಿಲ್ಲ

ಎನ್ನುತ್ತಾರೆ. ಇವರು ಈ "ಶ್ವಾಸದ ಮೇಲೆ ಗಮನ" ಸಾಧನೆಯನ್ನು ಮಾಡುವುದಿಲ್ಲ. ಆ ಪುಸ್ತಕಗಳ ಮೂಲಕ ತಿಳಿದುಕೊಂಡು ಅಯ್ಯೋ ನಾವು ಬಹಳ ತಿಳಿದುಕೊಂಡಿದ್ದೇವೆ, ಬಹಳ ಜ್ಞಾನವಿದೆ ಎಂದುಕೊಳ್ಳುತ್ತಾರೆ. ಇಂಥವರನ್ನು ಚಂದ್ರವಂಶೀಕರೆಂದು ಹೇಳಿಕೊಳ್ಳಬಹುದು ಎಂದು ಪತ್ರೀಜಿಯವರು ಹೇಳಿದ್ದಾರೆ.

ಆದರೆ, ಯಾರಾದರೆ ಸ್ವಾಧ್ಯಾಯ, ಸಜ್ಜನ ಸಾಂಗತ್ಯವನ್ನು ಮಾಡುತ್ತಾ ಅವುಗಳೊಂದಿಗೆ ಸ್ವಯಂ ಧ್ಯಾನ ಅಭ್ಯಾಸಕ್ಕೆ ಅತ್ಯಧಿಕವಾಗಿ ಅಂಕಿತವಾಗಿ ಇರುತ್ತಾರೋ ಅವರು ಸ್ವಯಂ ಪ್ರಕಾಶಕರಾಗಿ ಬದಲಾಗುತ್ತಾರೆ. ಅವರನ್ನೇ ಸೂರ್ಯವಂಶೀಕರು ಎನ್ನುತ್ತಾರೆ.

ಈಗ ಯಾರಾದರೆ ವರ್ಷಗಳಿಂದ ಭೀಮವರಂ ತರಗತಿಗಳಿಗೆ ಬರುತ್ತಿದ್ದಾರೋ, ಬೆಳಗಿನ ಜೂಮ್‌ನಲ್ಲಿ ಕೂಡ ಪಾಲ್ಗೊಳ್ಳುತ್ತಿದ್ದಾರೋ ಅವರೆಲ್ಲರನ್ನು ಕೂಡ ನಾವು ಸೂರ್ಯವಂಶೀಕರು ಎಂದು ಹೇಳಿಕೊಳ್ಳಬಹುದು. ಏಕೆಂದರೆ ಇವರು ನಿಧಾನವಾಗಿ ಅಪರೋಕ್ಷ ಜ್ಞಾನವನ್ನು ಸಂಪಾದಿಸಿಕೊಳ್ಳುತ್ತಿದ್ದಾರೆ.

ಸುಮ್ಮನೆ ಪುಸ್ತಕಗಳನ್ನು ಓದಿ ಏನೋ ನಾಲ್ಕು ಜನರು ಕುಳಿತು ಆ ಪುಸ್ತಕಗಳಲ್ಲಿ ಓದಿರುವುದನ್ನು ಚರ್ಚೆ ಮಾಡಿದರೆ ಅವರು ಚಂದ್ರವಂಶೀಕರೇ. ಅವರಿಗೆ ತರಗತಿಯನ್ನು ಬಿಡಿಯಾಗಿ ಹೇಳಿ ಎಂದರೆ ಏನನ್ನೂ ಹೇಳಲಾರರು. ಹೇಳಿದರೂ ಅರ್ಥ ತಪ್ಪುಗಳಿರುತ್ತವೆ. ಏನೋ ದೊಡ್ಡಸ್ಥಿಕೆಗಾಗಿ ಹೇಳೋಣ ಎಂದುಕೊಳ್ಳುತ್ತಾರೆಯಾಗಲಿ ಅವರು ತಿಳಿದುಕೊಂಡಿರುವುದಕ್ಕೆ ಹೆಚ್ಚಾಗಿ ಇವರ ಸ್ವಂತ ಜ್ಞಾನವನ್ನು ಹೇಳೋಣ ಎಂದುಕೊಂಡರೆ ಉಪಯೋಗವಿರದು.

ಎಲ್ಲರೂ ಇಷ್ಟು ಧ್ಯಾನವನ್ನು ಮಾಡುತ್ತಿದ್ದೇವೆ ಏನು ಲಾಭ ಬಂದಿದೆ ಎಂದು ಆಲೋಚಿಸುತ್ತಾರೆ. ಆದರೆ ಆ ಮಹನೀಯರಂತೆ, ಒಬ್ಬ ಪತ್ರೀಜಿಯಂತೆ, ಒಬ್ಬ ಬುದ್ಧನಂತೆ, ರಮಣ ಮಹರ್ಷಿಯಂತೆ, ವಿವೇಕಾನಂದರಂತೆ ನಾವು ಬೋಧಿಸುತ್ತಿದ್ದೇವೆಯೇ ಎಂಬುದನ್ನೇ ನೀವು ಗಮನಿಸಿಕೊಳ್ಳಬೇಕು.

ನಾನು ಪತ್ರೀಜಿಯವರ ವಿಷಯದಲ್ಲಿ ಆಶ್ಚರ್ಯಗೊಂಡೆನು. ಏನೋ ಒಂದು ಅಂಶವನ್ನು ತೆಗೆದುಕೊಳ್ಳುತ್ತಾರೆ. ಒಂದು ಗಂಟೆ ಕೂಡ ತರಗತಿಯನ್ನು ಹೇಳಿಬಿಡುತ್ತಾರೆ ಹೇಗೆ ಹೇಳುತ್ತಿದ್ದಾರೆ ಇವರು ಎಂದುಕೊಳ್ಳುತ್ತಿದ್ದೆನು. ಯಾವಾಗಲೂ ಹೇಳಿದವನ್ನೇ ಹೇಳುತ್ತಿದ್ದರೆ ಜನರಿಗೆ ಬೋರ್ ಹೊಡೆಯುತ್ತದೆ ಎಂದು, ಆತನು ಕ್ಲಾಸ್ ಪ್ರಾರಂಭಿಸುವ ಮೊದಲು ಎಷ್ಟು ಜನರು ಬಂದಿರಲಿ, ಕೆಲವರನ್ನು ಕರೆದು ಮಾತನಾಡು ಎನ್ನುತ್ತಿದ್ದರು. ಅವರು ಮಾತನಾಡಿದಾಗ ಕೆಲವರು ವಿಷಯಗಳನ್ನು ಹೇಳುತ್ತಿದ್ದರೆ ಆ ವಿಷಯಗಳ ಒಳಗಿಂದ ಸ್ವಲ್ಪ ಚೆನ್ನಾಗಿರುವಂಥವು ಎದುರಿಗಿರುವವರನ್ನು ಆಕರ್ಷಿಸುವ ಅಂಶಗಳನ್ನು

ತೆಗೆದುಕೊಂಡು ಅವುಗಳ ಮೇಲೆ ನಿರರ್ಗಳವಾಗಿ ಹೇಳುತ್ತಿದ್ದರು.

ಅದಕ್ಕೂ ಮೊದಲು ಆ ಟಾಪಿಕ್ ಹೇಳಬೇಕೆಂದು ಅವರು ಅಂದುಕೊಂಡಿರಲ್ಲ. ಜನರನ್ನು ಮಾತನಾಡಿಸುವುದರಲ್ಲೇ ಒಂದು ಅಂಶವನ್ನು ಹಿಡಿದುಕೊಳ್ಳುತ್ತಾರೆ. ಆಗ ನನಗೆ ಅರ್ಥವಾಯಿತು. ಏನು ಹೇಳಬೇಕೋ ಅದು ನಿಮಗೆ ಅರ್ಥವಾದಾಗ ನೀವು ಸೂರ್ಯವಂಶೀಕರಾದರೆ, ಅಲ್ಲಿ ಸ್ವಲ್ಪ ಜನರನ್ನು ಮಾತನಾಡಿಸಿ ಅದರೊಳಗಿಂದ ಒಂದು ಅಂಶವನ್ನು ಹಿಡಿದುಕೊಂಡು ನೀವು ಹೇಳಬಲ್ಲವರಾದರೆ ನೀವು ಸ್ವಯಂಪ್ರಕಾಶಕರು. ಸೂರ್ಯವಂಶಿಕರಾದಂತೆ.

ಆತನು ಇನ್ನೂ ಏನು ಹೇಳಿದ್ದಾರೆ ಎಂದರೆ ಸರಿಯಾದ ಸಿದ್ಧಾಂತವನ್ನು ತಿಳಿದುಕೊಂಡವರು ಚಂದ್ರವಂಶೀಕರು. ಅಂದರೆ ಅವರು ದೊಡ್ಡ ದೊಡ್ಡವರು ಹೇಳಿದ ವಿಷಯಗಳನ್ನು ಪುಸ್ತಕಗಳನ್ನು ಓದಿ ಚೆನ್ನಾಗಿ ತಿಳಿದುಕೊಳ್ಳುತ್ತಾರೆ. ಬುದ್ಧಿ ಚೆನ್ನಾಗಿ ಹೆಚ್ಚಾದಾಗ ಅವರು ಗ್ರಹಿಸಿ ಅದನ್ನು ಇತರರಿಗೆ ಚೆನ್ನಾಗಿ ವಿವರಿಸಬಲ್ಲರು. ಆದರೆ, ಯಾರಾದರೆ ಆ ಎರಡನ್ನೂ ಮಾಡುತ್ತಾ ಅದರೊಂದಿಗೆ ಸರಿಯಾದ ಧ್ಯಾನ ಅಭ್ಯಾಸವನ್ನು ತೀವ್ರವಾಗಿ ಮಾಡುತ್ತಾರೋ ಅವರು ಸೂರ್ಯವಂಶೀಕರಾಗಿ ಬೆಳೆಯುತ್ತಿರುತ್ತಾರೆ ಎಂದಿದ್ದಾರೆ ಪತ್ರೀಜಿಯವರು.

ಪತ್ರೀಜಿಯವರು ಇನ್ನೂ ಏನು ಹೇಳಿದ್ದಾರೆಂದರೆ ಸಾಸಿವೆ ಕಾಳಿನಷ್ಟು ವಿಶ್ವಾಸವಿದ್ದರೂ ಪರ್ವತಗಳನ್ನು ಸಹಿತ ಕದಲಿಸಬಲ್ಲೆವು ಎಂದು ಯೇಸು ಪ್ರಭು ಹೇಳಿದ ಸಂದೇಶವನ್ನು ಇಲ್ಲಿ ಹೆಸರಿಸಿದ್ದಾರೆ.

ಅಂತಹ ಸಾಸಿವೆಕಾಳಿನಷ್ಟು ವಿಶ್ವಾಸವು, ಸ್ವಲ್ಪ ಮಾತ್ರದ ವಿಶ್ವಾಸವು ನಮ್ಮ ಬಗ್ಗೆ ನಮಗೆ ಇದ್ದರೆ ನಾವು ಮಾಡುವ "ಶ್ವಾಸದ ಮೇಲೆ ಗಮನ"ದ ಬಗ್ಗೆ ನಮಗೆ ಇದ್ದರೆ ಅನೇಕ ಆಧ್ಯಾತ್ಮಿಕ ಪರ್ವತಗಳನ್ನು ನಿಶ್ಚಯವಾಗಿ ಅಧಿರೋಹಿಸಬಲ್ಲವರಾಗುತ್ತೀರಿ. ಸ್ವಯಂಪ್ರಕಾಶಕರಾಗಿ ಬದಲಾಗುತ್ತೀರಿ. ಅಂಥವರೇ ಗುರುಗಳಾಗಿ ಬೆಳಗುತ್ತೀರಿ.

ಅದಕ್ಕೆ ನೀವು ನೋಡಿ ನಮ್ಮ ಬಳಿಗೆ ಎಷ್ಟೋ ಮಂದಿ ಬರುತ್ತಿದ್ದಾರೆ. ಅವರಲ್ಲಿ ಬಹಳಷ್ಟು ಜನರು ತರಗತಿಗಳನ್ನು ಸಹ ಹೇಳುತ್ತಿದ್ದಾರೆ. ಕೆಲವರು ಎರಡು ವರ್ಷ, ಮೂರು ವರ್ಷ ಇರುತ್ತಾರೆ ಆದರೆ, ಹಾಗೆಯೇ ಇದ್ದುಬಿಡುತ್ತಾರೆ. ಅವರಿಗೆ ವಿಶ್ವಾಸವಿಲ್ಲ. ನನ್ನಿಂದ ಹೇಗಾಗುತ್ತದೆ? ಎಂದುಕೊಳ್ಳುತ್ತಾರೆ. ಕೆಲವರು ಚೆನ್ನಾಗಿ ಹೇಳುತ್ತಿದ್ದರೆ ಅವರಿಗೆ ಏನೋ ಯಾವುದೋ ಪೂರ್ವ ಜನ್ಮದ ಸಂಸ್ಕಾರವಿರುತ್ತದೆ ಅದಕ್ಕೆ ಹಾಗೆ ಹೇಳಬಲ್ಲವರಾಗುತ್ತಿದ್ದಾರೆ ಎನ್ನುವಂತಹ ಭಾವವು ಅವರಲ್ಲಿದೆ. ಅಂದರೆ ನಾನೂ ಹೇಳಬಲ್ಲೆನು ಎಂಬ ವಿಶ್ವಾಸ ಅವರಿಗಿಲ್ಲ. ಅದಕ್ಕೆ ಎಷ್ಟು ವರ್ಷಗಳಾದರೂ ಹಾಗೆಯೇ ಕೇಳುತ್ತಾ ಇದ್ದುಬಿಡುತ್ತಾರೆ. ಆದರೆ, ಅವರಲ್ಲಿ ಬದಲಾವಣೆಬಾರದು. ಬೆಳವಣಿಗೆ

ಇರದು. ಅವರು ಏನನ್ನು ಹೇಳಬೇಕೆಂದರೂ ಪರರ ಮೂಲಕ ಹೊಂದಿದ್ದು ಇಲ್ಲವೇ, ಈ ಪುಸ್ತಕಗಳನ್ನು ಓದಿಯೋ, ಆ ವಿಡಿಯೋ ಕೇಳಿಯೋ ಹೇಳುತ್ತಾರೆ. ಹಾಗೆಯೇ ಪರರ ಮೂಲಕ ಜ್ಞಾನವನ್ನು ಹೊಂದಿದವರೆಲ್ಲ ಶಿಷ್ಯರಾಗಿಯೇ ಉಳಿದುಬಿಡುತ್ತಾರೆ.

ಆದ್ದರಿಂದ ನೀವು ಯಾವುದೋ ಒಂದು ಅಂಶವನ್ನು ತೆಗೆದುಕೊಳ್ಳಿ ಅದರ ಮೇಲೆ ಒಂದು ಗಂಟೆ, ಎರಡು ಗಂಟೆಯ ತರಗತಿ ಹೇಳುವುದಕ್ಕೆ ಪ್ರಯತ್ನಿಸಿರಿ ಆಗ ನೀವು ಸೂರ್ಯವಂಶೀಕರಾದಂತೆ. ನೀವು ಗುರುಗಳು ಆದಂತೆಯೇ ಲೆಕ್ಕ.

ಲೋಕದಲ್ಲಿ ಈ ಇಬ್ಬರೂ ಕೂಡ ಅಲ್ಲದೆ, ಆ ಪರ ಪ್ರಕಾಶದೊಂದಿಗೆ ಕೂಡ ಜೀವಿಸುವವರು ಅಂಧಕಾರದಲ್ಲಿ ಮುಳುಗುತ್ತಾ ಇರುವವರು ಕೂಡ ಇದ್ದಾರೆ. ಅಂದರೆ ಇಲ್ಲಿ ನಮಗೆ ಮೂರು ರೀತಿಯವರು ಕಾಣಿಸುತ್ತಾರೆ. ಸ್ವಯಂಪ್ರಕಾಶದಿಂದ ಜೀವಿಸುವವರು, ಪರ ಪ್ರಕಾಶದೊಂದಿಗೆ ಜೀವಿಸುವವರು, ಆ ಪರ ಪ್ರಕಾಶದೊಂದಿಗೆ ಕೂಡ ಜೀವಿಸದವರು. ಈ ಮೂರನೆಯವರು ಅಂಧಕಾರದಲ್ಲಿ ಮುಳುಗಿ ಹೋಗುತ್ತಿದ್ದಾರೆ. ಆದ್ದರಿಂದ ಯಾರು ಕೂಡ ಶಿಷ್ಯರಾಗಿಯೇ ಇದ್ದು ಬಿಡಬಾರದೆಂದರೆ ಪರ ಪ್ರಕಾಶದಿಂದ ಜೀವಿಸುವುದಲ್ಲ. ಅಂದರೆ ಪರರು ಬೋಧಿಸಿದ್ದನ್ನು ಬೋಧಿಸುವುದಲ್ಲ, ಕಲಿತುಕೊಳ್ಳುವುದಲ್ಲ. ಹಾಗೆ ಜೀವಿಸಿದರೆ ಅವರು ಶಿಷ್ಯರಾಗಿಯೇ ಉಳಿದುಬಿಡುತ್ತಾರೆ.

ಆದ್ದರಿಂದ ಮಾನವರು ಕೂಡ ಗುರುಗಳಾಗಿ, ಸ್ವಯಂಪ್ರಕಾಶಕರಾಗಿ ಪರಿಪೂರ್ಣ ರಾಗಬೇಕೆಂಬುದೇ ಪಿ.ಎಸ್.ಎಸ್.ಎಂ.ವೊಂದರ ಪ್ರಧಾನ ಸಿದ್ಧಾಂತ ಅಂದರೆ ಲಕ್ಷ್ಯ.

ಆದ್ದರಿಂದ ಯಾರಾದರೆ ಸ್ವಾಧ್ಯಾಯ, ಸಜ್ಜನ ಸಾಂಗತ್ಯ ಮುಂತಾದವುಗಳನ್ನು ಮಾತ್ರವೇ ಮಾಡುತ್ತಾರೋ ಅವರು ಪರೋಕ್ಷ ಜ್ಞಾನವನ್ನು ಹೊಂದುತ್ತಾರೆ. ಆದರೆ, ಯಾರಾದರೆ ಈ ಎರಡರೊಂದಿಗೆ ಅಕುಂಠಿತ ಧ್ಯಾನ ಸಾಧನೆ ಮಾಡಿ ಅಪರೋಕ್ಷ ಜ್ಞಾನವನ್ನು ಹೊಂದುತ್ತಾರೋ ಅವರು ಸ್ವಯಂ ಪ್ರಕಾಶಕರಾಗಿ ಬೆಳೆಯುತ್ತಾರೆ. ಪರಿಪೂರ್ಣರಾಗುತ್ತಾರೆ.


ಪತ್ರೀಜಿಯವರು ಕೊನೆಗೆ ಏನು ಹೇಳಿದ್ದಾರೆ ಎಂದರೆ ಪ್ರಪ್ರಥಮವಾಗಿ ಎಲ್ಲರೂ ಸ್ವಾಧ್ಯಾಯ, ಸಜ್ಜನ ಸಾಂಗತ್ಯವನ್ನು ವಿಶೇಷವಾಗಿ ಮಾಡುತ್ತಾ ಚಂದ್ರವಂಶೀಕರಾಗಿದ್ದರೂ ಅಕುಂಠಿತ ದೀಕ್ಷೆಯಿಂದ ಧ್ಯಾನ ಸಾಧನೆ ಮಾಡಿದರೆ ಕ್ರಮೇಣ ಸೂರ್ಯವಂಶಿಕರಾಗಿ ಬೆಳೆಯುತ್ತಾರೆ ಎಂದಿದ್ದಾರೆ.

ಕೊನೆಗೆ ಪತ್ರೀಜಿಯವರು ಚಂದ್ರವಶೀಕರಾದವರಿಗೆ ಅಭಿನಂದನೆಗಳು. ಸೂರ್ಯವಂಶೀಕರಾದವರಿಗೆ ಶತಕೋಟಿ ಸೂರ್ಯ ನಮಸ್ಕಾರಗಳು ಎಂದಿದ್ದಾರೆ. ಆದಕಾರಣ ಪ್ರತಿಯೊಬ್ಬರೂ ಸೂರ್ಯವಂಶೀಕರಾಗಿ ವಿಜೃಂಭಿಸಬೇಕು. ಈ ಮಾರ್ಗದೊಳಗೆ ಬಂದವರು ತಿಳಿದುಕೊಳ್ಳಬೇಕಾದದ್ದು ಇದೆ.

## ಶ್ರೀರಾಮ ಪಬ್ಲಿಕೇಶನ್ಸ್‌ನಲ್ಲಿ ದೊರೆಯುವ ಪುಸ್ತಕಗಳು


| | | |
|---|---|---|
| 1. | ಅಹಿಂಸೆ ಮತ್ತು ಶಾಖಾಹಾರ | ರೂ. 20 |
| 2. | ನವವಿಧ ಧರ್ಮಗಳ | ರೂ. 40 |
| 3. | ಧ್ಯಾನ | ರೂ. 60 |
| 4. | ವಿದ್ಯಾರ್ಥಿಗಳ ವಿಕಾಸಕ್ಕೆ ಧ್ಯಾನ ವಿದ್ಯೆ | ರೂ. 30 |
| 5. | ಭಾಗವತ ಸನ್ನಿವೇಶಗಳ ಅಂತರಾರ್ಥ | ರೂ. 30 |
| 6. | ಶಿರಡಿ ಸಾಯಿ ಸಂದೇಶಗಳು | ರೂ. 30 |
| 7. | ಪ್ರಾಣ ಶಕ್ತಿ | ರೂ. 100 |
| 8. | ಜೀವನದ ಸೂಕ್ತಗಳು | ರೂ. 100 |
| 9. | ಸಂಘಂ ಶರಣಂ ಗಚ್ಛಾಮಿ | ರೂ. 300 |
| 10. | ತುಳಸಿ ದಳ (i) | ರೂ. 200 |
| 11. | ತುಳಸಿ ದಳ (ii) | ರೂ. 220 |
| 12. | ಆಶ್ಚರ್ಯ ಆಶ್ಚರ್ಯ | ರೂ. 40 |
| 13. | ದುಃಖ ನಿವಾರಣೆಯ ಮಾರ್ಗ | ರೂ. 70 |
| 14. | ಧ್ಯಾನದಿಂದಲೇ ಜ್ಞಾನ | ರೂ. 70 |
| 15. | ಬ್ರಹ್ಮಜ್ಞಾನ | ರೂ. 70 |
| 16. | ಜ್ಞಾನ ಜ್ಯೋತಿ | ರೂ. 90 |
| 17. | ಗೈಡಿಂಗ್ | ರೂ. 100 |
| 18. | ಸಂಕಲ್ಪವೆಂದರೇನು? | ರೂ. 50 |
| 19. | ಕರ್ಮ ಸಿದ್ಧಾಂತ | ರೂ. 70 |
| 20. | ಜ್ಞಾನ ಕುಸುಮಗಳು | ರೂ. 90 |
| 21. | ಆಲೋಚನಾ ಶಕ್ತಿ | ರೂ. 40 |
| 22. | ಆತ್ಮವಿಜ್ಞಾನ ಮತ್ತು ಮೃತ್ಯುವೇ ಇಲ್ಲ | ರೂ. 40 |
| 23. | ಆಧ್ಯಾತ್ಮಿಕ ಶಾಸ್ತ್ರ | ರೂ. 40 |
| 24. | ಮರಣದ ನಂತರ ನಮ್ಮ ಜೊತೆ ಬರುವುದು | ರೂ. 60 |
| 25. | ಜ್ಞಾನ ಯುಗ | ರೂ. 60 |
| 26. | ಸೇತು ವಿಜ್ಞಾನ | ರೂ. 40 |
| 27. | ಮರಣಿಸುವ ಮುಂಚೆಯೇ ಮರಣಿಸಬೇಕು | ರೂ. 130 |
| 28. | ಅತೀಂದ್ರಿಯ ಶಕ್ತಿಗಳು | ರೂ. 40 |
| 29. | ಆಲೋಚಿಸಿ | ರೂ. 70 |
| 30. | ನಿರ್ವಾಣ ಮಾರ್ಗ | ರೂ. 60 |
| 31. | ಸತ್ಯ | ರೂ. 40 |
| 32. | ಆರ್ಥಿಕ ಪರಿಸ್ಥಿತಿ | ರೂ. 40 |
| 33. | ಚಕ್ರಗಳು | ರೂ. 30 |
| 34. | ಭೂತದಯೇ ಮತ್ತು ದೈವತ್ವ | ರೂ. 80 |
| 35. | ಮೌನ ಧ್ಯಾನ | ರೂ. 40 |
| 36. | ಗುರುವನ್ನು ಗುರುತಿಸುವುದು ಹೇಗೆ? | ರೂ. 30 |
| 37. | ತ್ರೀ ವಿಧಗಳು | ರೂ. 70 |
| 38. | ಈ ಜೀವನವಿರುವುದು ಏಕೆ? | ರೂ. 50 |
| 39. | ಧ್ಯಾನವೆಂದರೆ? | ರೂ. 60 |
| 40. | ಮೆಹರ್ ಬಾಬಾ ಸಂದೇಶ | ರೂ. 80 |
| 41. | ಬುದ್ಧನ ಸೂಕ್ತಿಗಳು | ರೂ. 60 |
| 42. | ಸತ್ಯಮಾರ್ಗ | ರೂ. 80 |
| 43. | ಶಾಸ್ತ್ರಗಳ ಅಂತರಾತ್ಮ | ರೂ. 80 |
| 44. | ಜೀವನ ಶಾಸ್ತ್ರ | |

**ಬ್ರಹ್ಮರ್ಷಿ ಪಿತಾಮಹ ಡಾ. ಸುಭಾಷ್ ಪತ್ರೀಜಿಯವರ**
**ಆಶೀರ್ವಾದಗಳೊಂದಿಗೆ**




**"ಧ್ಯಾನವೆಂದರೆ ಶ್ವಾಸದ ಮೇಲೆ ಗಮನ"**

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್ ಹಾಗೂ ಬ್ರಹ್ಮವಿದ್ವರಿಷ್ಟ ರಾಜಲಕ್ಷ್ಮೀ ಅಮ್ಮನವವರು (ಭೀಮಾವರಂ ಎ.ಪಿ.) ನೇತೃತ್ವದಲ್ಲಿ ಧಾರವಾಡದಲ್ಲಿ ಪ್ರತಿ ತಿಂಗಳು 7, 8, 9 ರಂದು ಮೂರು ದಿನಗಳ ನಿಶ್ಯಬ್ಧ ಧ್ಯಾನ ಹಾಗೂ ಆತ್ಮಜ್ಞಾನ ಯಜ್ಞ ನಡೆಯಲಿದೆ.

ವಿಳಾಸ:

**ಅಕ್ಕಮಹಾದೇವಿ ಆಶ್ರಮ, ಗಣೇಶ ನಗರ, ರೈಲ್ವೇ ಟ್ರ್ಯಾಕ್ ಹತ್ತಿರ**
**ಹಳಿಯಾಳ ರೋಡ್, ಧಾರವಾಡ**
**ಉಚಿತ ವಸತಿ ಹಾಗೂ ಅನ್ನಪ್ರಸಾದದ ವ್ಯವಸ್ಥೆ ಇರುತ್ತದೆ.**
**ರಿಜಿಸ್ಟ್ರೇಷನ್ ಕಡ್ಡಾಯ**
**--- ವಿವರಗಳಿಗಾಗಿ ಸಂಪರ್ಕಿಸಿ ---**
**ಸಾಯಿಲೀಲಾ (ಪಿರಮಿಡ್ ಮಾಸ್ಟರ್) ಮೊ: 6309247146**



**ಬ್ರಹ್ಮರ್ಷಿ ಪಿತಾಮಹ ಡಾ. ಸುಭಾಷ್ ಪತ್ರೀಜಿಯವರ**
**ಆಶೀರ್ವಾದಗಳೊಂದಿಗೆ**

ಶ್ರೀ ರಾಮಧಾಮ ಧ್ಯಾನ ಮಂದಿರ
ನಾರಾಯಣಪ್ಪ ಗಾರ್ಡನ್, ವೈಟ್‌ಫೀಲ್ಡ್ ಬೆಂಗಳೂರಿನಲ್ಲಿ ಪ್ರತಿ ಸೋಮವಾರ ಸಂಜೆ 5.30 ರಿಂದ 8.30ರ ವರೆಗೆ ಧ್ಯಾನ ಇರುತ್ತದೆ. ಪ್ರತಿ ಹುಣ್ಣಿಮೆ ಹಾಗೂ ಅಮಾವಾಸ್ಯೆ ದಿನದಂದು ವಿಶೇಷ ಧ್ಯಾನ ಶಿಬಿರ ನಡೆಸಲಾಗುತ್ತದೆ. ಪ್ರತಿ ಮೂರು ತಿಂಗಳಿಗೊಮ್ಮೆ ಮೂರು ದಿನ ಧ್ಯಾನ ಮತ್ತು ಆತ್ಮಜ್ಞಾನ ಯಜ್ಞ ಉಚಿತವಾಗಿ ನಡೆಯುತ್ತದೆ. ಈ ಕುರಿತು ಪಿಎಂಸಿ ಕನ್ನಡ ಚಾನಲ್ ಹಾಗೂ ಧ್ಯಾನ ಕಸ್ತೂರಿ ಮಾಸ ಪತ್ರಿಕೆಯಲ್ಲಿ ಮಾಹಿತಿ ಪ್ರಕಟಿಸಲಾಗುತ್ತದೆ.

**--- ವಿವರಗಳಿಗಾಗಿ ಸಂಪರ್ಕಿಸಿ ---**
**ಹೆಚ್. ಎನ್. ಶ್ರೀನಿವಾಸ ಮೊ. 9449695503**
**ವಿಜಯಲಕ್ಷ್ಮೀ ಎಸ್. ಎನ್. ಮೊ. 8050082689**



ಧಾರವಾಡದ ಅಕ್ಕಮಹಾದೇವಿ ಆಶ್ರಮದಲ್ಲಿ ನಡೆದ ಧ್ಯಾನ ಹಾಗೂ ಆತ್ಮಜ್ಞಾನ ಯಜ್ಞದಲ್ಲಿ ಭಾಗವಹಿಸಿದ ಧ್ಯಾನಿಗಳು.



# ಮೂರು ರೀತಿಯ ಜೀವನಗಳು

ಮಾನವರಿಗೆ ಮೂರು ರೀತಿಯ ಜೀವನಗಳಿರುತ್ತವೆ. ಈ ಮೂರು ಕೂಡ ಮಾನವನ ಅಜ್ಞಾನ ಪರಿಧಿಯನ್ನು ಸೂಚಿಸುವಂತವೇ. ಮತ್ತೆ ಈ ಮೂರು ರೀತಿಯ ಜೀವನಗಳನ್ನು ಜೀವಿಸುವವರ ಕುರಿತು ಹೇಳಿಕೊಳ್ಳೋಣ. ನಿಜವಾಗಿಯೂ ಯಾವುವು ಆ ಮೂರು ರೀತಿಗಳು.

1) ರಾತ್ರಿ ಜೀವನ 2) ಸಂಧ್ಯಾ ಜೀವನ 3) ಹಗಲು ಜೀವನ

ರಾತ್ರಿ ಜೀವನವೆಂದರೆ ಪೂರ್ತಿಯಾಗಿ ಅಜ್ಞಾನದೊಂದಿಗೆ ಇರುವಂತಹ ಜೀವನ. ಅದಕ್ಕೆ ಅಜ್ಞಾನವನ್ನು ಕತ್ತಲಿನೊಂದಿಗೆ ಹೋಲಿಸುತ್ತಾರೆ. ಕತ್ತಲಿನಲ್ಲಿ ಇರುವಂಥವು ಹೇಗೆ ಕಾಣಿಸುವುದಿಲ್ಲವೋ ಅಜ್ಞಾನದೊಳಗೆ ಇರುವವರಿಗೆ ಇರುವಂಥವು ಕಾಣಿಸವು. ಅಂದರೆ ತಿಳಿಯವು. ಸಂಧ್ಯಾ ಜೀವನದಲ್ಲಿ ಜ್ಞಾನವನ್ನು ಹೊಂದುತ್ತೀರಿ ಜ್ಞಾನದ ಮೇಲೆ ಆಸಕ್ತಿ ಇದೆ ಆದರೆ, ಆ ಜ್ಞಾನದ ಕುರಿತು ಹೇಳಿದ ವಿಷಯಗಳು ಪೂರ್ತಿಯಾಗಿ ಅರ್ಥವಾಗದೇ ಇರುವುದರಿಂದ, ಇಲ್ಲವೇ ಭಯದಿಂದ ಆಚರಣೆ ಇರದು. ಎಲ್ಲ ಗೊತ್ತಿದೆ, ಆದರೆ ವರ್ತನೆಯಲ್ಲಿ ಬದಲಾವಣೆ ಬಾರದು. ಮತ್ತೆ ತಿಳಿದಿದ್ದರೂ ಕೂಡ ಆಚರಿಸದೆ ಹೋದರೆ ಬದಲಾವಣೆಯನ್ನು ತಂದುಕೊಳ್ಳದೆ ಹೋದರೆ ಸಂಧ್ಯಾ ಜೀವನದಲ್ಲಿ ಇದ್ದಂತೆಯೇ. ಹಗಲು ಜೀವನ ಅಂದರೆ ಇದು ಪೂರ್ತಿಯಾಗಿ ಜ್ಞಾನವನ್ನು ಹೊಂದಿದವರ ಜೀವನ. ಧ್ಯಾನ ಸಾಧನೆಯನ್ನು ತೀವ್ರವಾಗಿ ಮಾಡುವುದರಿಂದ ಇವರ ಜ್ಞಾನವು ಅಪಾರವಾಗಿ ಬೆಳೆಯುತ್ತದೆ. ಅಗ್ನಿಯಂತೆ ಪ್ರಜ್ವಲಿಸುತ್ತದೆ. ಅಂತಹ ಜ್ಞಾನಾಗ್ನಿಯಲ್ಲಿ ಇವರು ಕರ್ಮಗಳನ್ನು ಕೂಡ ದಗ್ಧ ಮಾಡಿಕೊಳ್ಳುತ್ತಾರೆ. ಮೋಕ್ಷವನ್ನು, ಮುಕ್ತಿಯನ್ನು ಕೂಡ ಹೊಂದುತ್ತಾರೆ.

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್‌ರವರು

ರೂ. 50/-




ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ
ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂಪರ್ಕಿಸಿ
http: //www.youtube.com/pmckannada
• www.meditationeverywhere.org • www.pssmovement.org

## ಶ್ರೀರಾಮ ಪಬ್ಲಿಕೇಶನ್ಸ್

ಶ್ರೀ ರಾಮಧಾಮ ಧ್ಯಾನ ಮಂದಿರ
ನಾರಾಯಣಪ್ಪ ಗಾರ್ಡನ್, ವೈಟ್‌ಫೀಲ್ಡ್ ಬೆಂಗಳೂರು–560 066
ಸಂಪರ್ಕಿಸಿ: ಹೆಚ್.ಎನ್. ಶ್ರೀನಿವಾಸ ಮೊ. 9449695503
ವಿಜಯಲಕ್ಷ್ಮೀ ಎಸ್.ಎನ್. ಮೊ. 8050082689